ತುಮಕೂರು
೧೯೪೩

'ರಾಗಿಣಿ'

ಕೆಲವು ಅಭಿಪ್ರಾಯಗಳು

ಕವಿಗಳು ವಿಸ್ತಾರವಾದೊಂದು 'ನನ್ನ ನುಡಿ'ಯನ್ನು ಬರೆದು
ರಲ್ಲಿ ಎಲ್ಲದಕ್ಕಿಂತಲೂ ಹೆಚ್ಚಾಗಿ ಭಾವಗೀತೆಗಳ ವಿಚಾರ ಲಾ
ಮತ್ತು ವ್ಯಾವಹಾರಿಕ ಸಿದ್ಧಾಂತಗಳನ್ನು ಒಂದುಗೂಡಿಸಿ ಬ
ಒಳ್ಳೆಯ ಪ್ರಬಂಧವನ್ನೇ ಬರೆದಿರುವರು. . . . . ಭಾವಗೀ
ಕನ್ನಡದಲ್ಲಿ ಹೊಸತಾದುದರಿಂದ, ಆಂಗ್ಲ ಕಾವ್ಯ ಲೋಕವನ್ನು
ಡದ ಕನ್ನಡಿಗರಿಗೆ ಕವಿಗಳು 'ನನ್ನ ನುಡಿ'ಯಲ್ಲಿ ಹೇಳಿದ ವಿಚಾ
ಮಾರ್ಗದರ್ಶಿಗಳಾಗಬಲ್ಲವು. . . . 'ರಾಧಾಕೃಷ್ಣ' ಒಂದು ಉ
ಪ್ರೇಮ ಚಿತ್ರ. ಈ ಚಿತ್ರವನ್ನು ಸಂಸ್ಕೃತದ ಹಲವು ಕವಿಗಳು
ಸಿದ್ದಾರೆ; ಆದರೆ ಹೊಸಕವಿಯ ಕುಂಚದಲ್ಲಿ ಇದಕ್ಕೆ ಹೊಸತೇ ಬ
ಸೊಬಗು ಬಂದಿದೆ. 'ರಾಗಿಣಿ' ಸಂಸ್ಕೃತಾಲಂಕಾರಿಕರ ರಸಲೋ
ಒಬ್ಬಳು ನಾಯಿಕೆಯೆನ್ನಬಹುದು; ಕವಿಗಳು ಈ ಚಿತ್ರವನ್ನು ಎ
ದಲೇ ಆಯ್ದುಕೊಂಡಿರಲಿ ಇದೂ ನವೀನವೂ ಮೋಹಕವೂ ಆಗಿ
. . . . 'ದೀಪಹಚ್ಚಾ' ಇದು ಈ ಸಂಗ್ರಹದಲ್ಲಿ ಅತ್ಯುತ್ತಮ ಕ
ಯೆಂದು ನಮ್ಮ ಮತ. 'ಜೀವದೇವ'ರ ನಂಟು ಇದರಲ್ಲಿ ಬ
ಮಧುರವಾಗಿ ಮೋಹಕವಾಗಿ ಭವ್ಯವಾಗಿ ರೂಪಿತವಾಗಿದೆ.

—ಸ್ವದೇಶಾಭಿ

ಕೊನೆಯಲ್ಲಿ ಬರುವ ಕಥನ ಕವಿತೆಗಳಲ್ಲಿ 'ಮಾಚಯ್ಯ' ಒ
ಉತ್ತಮ ಕವಿತೆ. ಇದೊಂದು ಅನುವಾದವಾದರೂ ಸ್ವತಂತ್ರ ಕವಿ
ತೇಜಸ್ಸು ಓಜಸ್ಸುಗಳಿವೆ. ಮೂಲದ ಒಲವು ನಲವುಗಳು ನೊ
ಕಾವುಗಳು ಅಚ್ಚಳಿಯದೆ ಇಲ್ಲಿ ಮೂಡಿ ನಿಂತಿವೆ. —ಜಯಕರ್ನಾ

ಜಹನಾರ

ಶ್ರೀಯುತ ರಂ. ಶ್ರೀ. ಮುಗಳಿಯವರ ಮುನ್ನುಡಿಯೊಡನೆ

ಎಸ್. ವಿ. ಪರಮೇಶ್ವರಭಟ್ಟ

ಪ್ರಕಾಶಕರು :
ಎಸ್. ವಿ. ಪರಮೇಶ್ವರಭಟ್ಟ, ಎಂ.ಎ.
ಕನ್ನಡ ಅಧ್ಯಾಪಕ
ಇಂಟರ್‌ಮೀಡಿಯೆಟ್ ಕಾಲೇಜು
ತುಮಕೂರು

ಪ್ರಥಮ ಮುದ್ರಣ
೧೯೪೩

ಬೆಲೆ : ಒಂದು ರೂಪಾಯಿ

ಮುದ್ರಕರು :
ಶ್ರೀ ಪಾಂಡುರಂಗ ಪ್ರ
ತುಮಕೂರು

ಮುನ್ನುಡಿ

'ರಾಗಿಣಿ'ಯನ್ನು ಕನ್ನಡಪ್ರಪಂಚಕ್ಕೆ ನೀಡಿ ಪರಿಚಿತರಾದ ಶ್ರೀ ಪರಮೇಶ್ವರಭಟ್ಟರು 'ಜಹನಾರ' ಎಂಬ ವಿರಾಗಿಣಿಯನ್ನು ಈಗ ನೀಡಿದ್ದಾರೆ. ಇದರಲ್ಲಿ ರಾಗಿಣಿಯ ರಾಗಾವೇಶವು ವಿರಾಗಿಣಿಯ ಚಿತ್ತ-ಶಾಂತಿಯಿಂದಲೂ ತತ್ವಚಿಂತನೆಯಿಂದಲೂ ಕಳೆದುಹೋಗದೆ ಕಳೆ-ಗೊಂಡಿದೆ. ಒಟ್ಟಿನಲ್ಲಿ ವಿರಾಗಿಣಿಯ ವೃತ್ತಿಯು ಇದರ ಸ್ಥಾಯಿಯೆ-ನ್ನಲು ಅಡ್ಡಿಯಿಲ್ಲ.

ಹೊಸಗನ್ನಡದಲ್ಲಿ ಭಾವಗೀತೆಯ ಬೆಳೆ ಹುಲುಸಾಗಿದ್ದರೂ ಕಥನ-ಕವಿತೆ ಮೊದಲಿನಿಂದ ಅಲ್ಲಲ್ಲಿ ಬೆಳೆದಿದೆ, ಕೆಲವು ಕಡೆ ಎತ್ತರವಾಗಿ ಮುಗಿಲು ಮುಟ್ಟಿದೆ. ಸರಳರಗಳೆ ಸಾಮಾನ್ಯವಾಗಿ ಅದರ ಛಂದೋ-ರೂಪ. ಆದರೆ ಬೇರೆ ಪದ್ಯಧಾಟಿಗಳಲ್ಲಿಯೂ ಅದು ಮೈದೋರಿದೆ. ಬಹುಶಃ ಮಾಸ್ತಿಯವರ 'ಸ್ಥಳಗಳ ಹೆಸರುಗಳು' ಎಂಬ ಕವನದಿಂದ ಈ ಬಗೆಯ ಬರೆವಣಿಗೆ ಮೊದಲಾಯಿತು. ರಸಿಕನಾದ ಕತೆಗಾರನ ಸಹಜವಾದ ಸೊಲ್ಲೇ ಕವಿತೆಯಾದಂತೆ ಇಲ್ಲಿ ತೋರಿತು. ಶ್ರೀನಿವಾಸರ ಕೈಯಲ್ಲಿ ಸರಳರಗಳೆ ಸರಳವಾಯಿತು, ರಗಳೆಯಾಗಲಿಲ್ಲ, ರಸದೂಟ-ವಾಯಿತು. 'ಮದಲಿಂಗನ ಕಣಿವೆ' ಅವರ ಸಿದ್ಧಿಗೆ ಒಳ್ಳೆಯ ಗುರುತು. ಮುಂದೆ ಪುಟ್ಟಪ್ಪನವರ 'ಕಿಂದರಿಜೋಗಿ ಮತ್ತು ಇತರ ಕವನಗಳು' ಕಥನಕವಿತೆಯಲ್ಲಿ ತಿಳಿನಗೆ, ಓಟ, ಕಲ್ಪಕತೆ, ಪದಸಂಪತ್ತಿ ಈ ಗುಣ-ಗಳನ್ನು ತಲೆದೋರಿಸಿದುವು. ಅವರ 'ಚಿತ್ರಾಂಗದಾ' ಎಂಬುದು ಅವರ ಪರಿಪಾಕವಾಯಿತು. ಬೇರೆ ಕವಿಗಳೂ ಈ ಕ್ಷೇತ್ರದಲ್ಲಿ ಕಾಲಿಟ್ಟರು. ಉದಾಹರಣೆಗೆ ಸಾಲಿಯವರ ಅಭಿಸಾರ, ಆನಂದಕಂದರ ವಿರಹಿಣಿ, ಶಂಕರಭಟ್ಟರ ನಲ್ಮೆ ಇವನ್ನು ನೆನೆಯಬಹುದು. ಶಂಕರಭಟ್ಟರ ನಲ್ಮೆ-ಯಲ್ಲಿ ಕಥನಕಲೆಯೊಡನೆ ಭಾವಗೀತೆಯ ಆತ್ಮಾವಿಷ್ಕಾರವು ಬೆರೆತು-ಕೊಂಡಿತು. ವಿಶೇಷವಾಗಿ ಅವರ 'ಮಾದ್ರಿಯ ಚಿತೆ' ಕವಿಯ ದರ್ಶನ-ವನ್ನು ಕಥೆಯಾಗಿ ಮೂಡಿಸಿದ ಒಂದು ಹಿರಿಯ ಕವಿತೆ. ಇತ್ತೀಚೆ ಶ್ರೀನಿವಾಸರು ಬರೆದ ಗೌಡರಮಲ್ಲಿ ಮತ್ತು ರಾಮನವಮಿ ಎಂಬ

ಕಥನಕವನಗಳಲ್ಲಿ ಅವರ ಶಕ್ತಿ ಮಾಗಿ ಪರಿಪಕ್ವತೆಯನ್ನು ಹೊಂದಿ
ಅವೆರಡೂ ಹೊಸಗನ್ನಡಕ್ಕೆ ಚಿರವಾದ ಕಾಣಿಕೆಗಳು. ರಾಮನವ
ಕಥನಕಲೆಯ ಸಹಜತೆಯೊಡನೆ ಕವಿಯ ದರ್ಶನವನ್ನು ರಮ್ಯವಾ
ಹೆಣೆದಿದೆ. ಹೊಸಗನ್ನಡದ ಆರಂಭಕ್ಕಿದ್ದ ಭಾವಗೀತೆಯ ಉಕ್ಕು ಇಂ
ಇಳಿದಿದೆ. ಕೇವಲ ಕಥನದ ವ್ಯಕ್ತಿನಿರಪೇಕ್ಷತೆಗೂ ಅವಕಾಶವಿ
ಬರಲಿರುವ ಕಾವ್ಯವು ಬಹುಶಃ ಕಥನದ ಬಹಿರಂಗದಲ್ಲಿ ಭಾವಗೀತೆ
ಅಂತರಂಗವನ್ನು ಹಾಸುಹೊಕ್ಕಾಗಿ ಸೇರಿಸುವುದು, ಯಾರದೋ ಕ
ಯೆಂಬುವ ಹೊರರೂಹಿನಲ್ಲಿ ತನ್ನದೇ ಒಳದಿರುಳನ್ನು ಕವಿ ತುಂ
ತುಳುಕಿಸುವನು. ಈ ಬಗೆಯಲ್ಲಿ ಪ್ರಗತಿಪರವಾದ ಕನ್ನಡಕಾವ್ಯ
ಒಂದು ನಿದರ್ಶನವೆಂಬಂತೆ 'ಜಹನಾರ' ಕೃತಿಯು ತೋರುತ್ತದೆ.

ಈ ಕೃತಿಯ ಕಥನರೀತಿ 'ಜಹನಾರ'ಳ ಆತ್ಮಕಥೆಯ ಸ್ವರೂಪ
ಆ ಮೊಗಲ ರಾಜಕುಮಾರಿ ತನ್ನ ಬಾಳಿನ ಕೊನೆಯ ದಿನಗಳಲ್ಲಿ
ಸೆರೆಯಲ್ಲಿದ್ದರೂ ಮನಸ್ಸನ್ನು ಹಿಂದಣ ಕಾಲದಲ್ಲಿ ಹರಿಬಿಟ್ಟು ತ
ನೋವುನಲಿವುಗಳನ್ನು ನೆನೆಯುತ್ತಾಳೆ, ತನ್ನ ನಲ್ಲನಾದ ರಜಪು
ವೀರನೊಡನೆ ತಾನು ಅನುಭವಿಸಿದ ರಸನಿಮಿಷಗಳನ್ನು ಚಿತ್ರಿಸುತ್ತಾ
ತಾನು ಪಡೆದ ಶಾಂತಿಯನ್ನೂ ಅರಿತ ತತ್ತ್ವವನ್ನೂ ಅರುಹುತ್ತಾ
ಹೀಗೆ ಪೂರ್ವಸ್ಮರಣದ ಅದ್ಭುತ ರಮ್ಯ ಅಂಶಗಳು ಇದರಲ್ಲಿ ಪ್ರಮು
ವಾಗಿವೆ. ಅವುಗಳ ಮೇಲೆಲ್ಲ ಜಹನಾರಳ ಪ್ರೌಢವಶೆಯ ಶಾಂತಿಭ
ಗಳು ತಮ್ಮ ಬೆಳಕನ್ನು ಬೀರಿವೆ. ನಡುನಡುವೆ ಹಿನ್ನೆಲೆಯಾಗಿ ಸೃ
ವರ್ಣನೆಗಳು ಬಂದಿವೆ. ಈ ನೂತನರೂಪದಲ್ಲಿ ಕಥನವು ಕುಂದದ
ಕಾವ್ಯಸತ್ವವು ಅಬಾಧಿತವಾಗಿ ಉಳಿಯುವಂತೆ ಕೃತಿಯನ್ನು ರಚಿ
ಕವಿಗಳನ್ನು ನಾನು ಮನವಾರೆ ಅಭಿನಂದಿಸುತ್ತೇನೆ.

'ಜಹನಾರ'ಳು ಇಲ್ಲಿಯ ಮುಖ್ಯಪಾತ್ರ. ಅವಳು ನೆನೆದ ಹಳೆ
ಸವಿನೆನಪುಗಳಿಂದ ಅವಳ ಉದಾತ್ತ ಸ್ವಭಾವವು ಚಿತ್ರಿತವಾಗಿ
ಅವಳ ಪ್ರೇಮವೆಷ್ಟು ಗಾಢವೋ ತ್ಯಾಗವು ಅಷ್ಟೇ ದೃಢವಾಗಿದೆ. ಕೊ
ಬಂಧನದಲ್ಲಿಯ ಅವಳ ಮನಸ್ಸು ಮುಕ್ತಿಯ ಶಾಂತಿಯನ್ನು ಪ
ಯಿತು. ಚರಿತ್ರೆಯ 'ಜಹನಾರ'ಳು ಇಷ್ಟು ಪರಿಪೂರ್ಣಳಾದ ಆದ

ರಮಣಿಯಾಗಿದ್ದಳೇ ಎಂಬುದು ಈ ಕೃತಿಗೆ ಪ್ರಸ್ತುತವಲ್ಲ. ಚರಿತ್ರೆಯ ಮೂಲವು ಇಲ್ಲಿಯ ಕಾವ್ಯಮಂದಿರಕ್ಕೆ ತಳಹದಿ ಮಾತ್ರ. ಅವಳು ನಿವೇದಿಸಿದ ನೆನಪುಗಳಲ್ಲಿ ಸುಳಿಯುವ ಅವಳ ನಲ್ಲನ ಪಾತ್ರವು ಕ್ಷತ್ರಿಯ ವೀರನಿಗೆ ಒಪ್ಪುವಂತೆ ಬಂದಿದೆ. ಈ ಕೃತಿಯನ್ನು ಮೇಲೆಮೇಲೆ ಓದಿದಾಗ 'ಹಳೆಯ ಹಾಡಿನ ನುಡಿಯನಿನ್ನೇಕೆ ನುಡಿಸುವುದು?' ಎಂಬುದಾಗಿ ಕವಿಯ ಪ್ರಶ್ನೆಯನ್ನೇ ಕವಿಗೆ ಕೇಳುವಂತಾಗಬಹುದು. ಹಿಂದಣ ಬಾಳಿನ ಕಥನದಲ್ಲಿ ಕವಿಗೆ ಒಂದು ತೃಪ್ತಿಯಿದೆ. ಅದರಲ್ಲಿಯೂ ಈ ಕೃತಿಗೆ ಇಂದಿನ ಧ್ವನಿಯೊಂದು ಇದರ ಗತಿಗತಿಯಲ್ಲಿ ನುಡಿಯುತ್ತದೆ. ಜಹನಾರಳಂಥ ತಪ್ತಹೃದಯಗಳು ಎಂದಿನಿಂದಲೂ ದೈವಹತವಾದ ಭಾರತವನ್ನು ಕಂಡು ಮರುಗಿವೆ, ತ್ಯಾಗಪೂತವಾಗಿ ತತ್ವಚಿಂತನೆಯಲ್ಲಿ ಮುಂದಿನ ದಾರಿಯನ್ನು ಅರಿತಿವೆ. ಈ ರಸವ್ಯಂಗ್ಯವು ಈ ಕೃತಿಯ ಮಹತಿಯನ್ನು ಹೆಚ್ಚಿಸಿರುತ್ತದೆ. ಇಲ್ಲಿ ಕವಿಯ ಆತ್ಮವು ತನ್ನ ಅಂತರಂಗವನ್ನು ಜಹನಾರಳ ಮೂಲಕ ತೋಡಿಕೊಂಡಿದೆ.

ಈ ಕವಿತೆಯಲ್ಲಿಯ ಕಲ್ಪನಾಶಕ್ತಿ ಮೆಚ್ಚುವಂಥದು, ಆಗಾಗ ಅದು ಮೇಲಟ್ಟಕ್ಕೆ ಏರುವುದು. ಅನೇಕ ಕಡೆಗೆ ಅದು ಒಂದು ಚಿಕ್ಕ ಇಲ್ಲವೆ ದೊಡ್ಡ ಉಪಮೆಯಾಗಿದ್ದರೆ ಒಮ್ಮೊಮ್ಮೆ ಉಪಮಾವಳಿಯಾಗಿ ರೂಪಕವಾಗಿ ಹಬ್ಬಿದೆ. ವರ್ಣನೆಗಳಲ್ಲಿ ಸೃಷ್ಟಿನಿರೀಕ್ಷಣೆಯ ನೋಟವಿದೆ, ಸೌಂದರ್ಯಮುಗ್ಧವಾದ ಕವಿಹೃದಯವಿದೆ, ಬಿಡಿಬಿಡಿಸಿ ಬಣ್ಣಿಸುವ ಕೈವಾಡವಿದೆ. ಸರಳರಗಳೆಯ ರೂಪವು ಕವಿಯ ಸಾವಧಾನದ ಅಭಿವ್ಯಕ್ತಿಗೆ ಎಲ್ಲ ಅವಕಾಶವನ್ನು ಕಲ್ಪಿಸಿಕೊಟ್ಟಿದೆ. ರಚನೆಯ ದೃಷ್ಟಿಯಿಂದ ನೋಡಿದರೆ ಶ್ರೀನಿವಾಸರ ಸರಳಸುಂದರಶೈಲಿಯೂ ಪುಟ್ಟಪ್ಪನವರ ಪ್ರೌಢರಮ್ಯರೀತಿಯೂ ಈ ಕೃತಿಯಲ್ಲಿ ಒಂದಾಗಿವೆ.

ಈ ಕೃತಿಯನ್ನು ಮೆಚ್ಚುವ ಕಾಲದಲ್ಲಿ ಇದರಲ್ಲಿ ನುಸುಳಿದ ಲೋಪದೋಷಗಳ ಅರಿವು ನನಗಿದೆ, ಕವಿಗೂ ಇರುವುದೆಂದು ನಾನು ಭಾವಿಸುತ್ತೇನೆ. ಸವಿನೆನಪುಗಳ ನೂರಾರು 'ದೃಶ್ಯಜ್ಯೋತಿರ್ಮಾಲೆ' ಮೂಡಿ ಬರುತ್ತಿಹವೆಂದು ಜಹನಾರಳು ಹೇಳುತ್ತಾಳೆ, ಅವುಗಳಲ್ಲಿ ಎರಡುಮೂರು ಇಲ್ಲಿ ಮೂಡಿವೆ. ಆದರೆ ಆ ಪ್ರಣಯಿಗಳ ಪ್ರಣಯಜೀವನದ ಮೊದಲು,

ಅದರ ಬೆಳವಣಿಗೆಯಲ್ಲಿ ಬಂದ ಎಡರುತೊಡರುಗಳು, ಅವರು ಅವ ಮೀರಿ ನಿಂತ ನೆಲೆ ಇವನ್ನು ಚಿತ್ರಿಸಬೇಕಾಗಿತ್ತು. ಮೊಗಲಕುಮ ಯು ಹೆಚ್ಚುಕಡಿಮೆ ಹಿಂದಕುಮಾರಿಯಂತೆ ಭಾವಭಾಷೆಗಳಲ್ಲಿ ತೋ ತ್ತಾಳೆ. ಈ ಅಸಹಜತೆಯನ್ನು ಕಳೆಯಬಹುದಾಗಿತ್ತು. ತತ್ತ್ವಭಾಗ ಸಂದರ್ಭಕ್ಕೆ ಹೊಂದಿಕೆ ಬೇಕು. ಕೊನೆಯ ಮಂಗಳಶ್ಲೋಕ ಹಚ್ಚಿದಂತಿದೆ. ಶೈಲಿಯಲ್ಲಿ ವಿಸ್ತಾರವಿದ್ದಂತೆ ಶೈಥಿಲ್ಯವೂ ಅಲ್ಲಲ್ಲಿ ಕಾ ತ್ತದೆ. ಪದರಚನೆಯ ಪದ್ಯಬಂಧದ ಬಿಗುವು ಹೆಚ್ಚಬೇಕಿತ್ತು. ಹೊ ಗನ್ನಡ ಕವನದಲ್ಲಿ ಹಳಗನ್ನಡ ರೂಪಗಳ, ವಿಶೇಷವಾಗಿ ಬಿಂದು ಹಾವಳಿಯನ್ನು ತಪ್ಪಿಸಬಹುದಾಗಿತ್ತು.

ಶ್ರೀ ಪರಮೇಶ್ವರಭಟ್ಟರ ಈ ಎರಡನೆಯ ಕಾವ್ಯಗ್ರಂಥ ಅ ಮುನ್ನಡೆಯ ಗುರುತಾಗಿದೆ. ಇವರ ಈ ಕೃತಿಯನ್ನು ಕನ್ನಡರಸಿ ಪ್ರೀತಿಯಿಂದ ಬರಮಾಡಿಕೊಂಡು ತಮ್ಮ ಆನಂದವನ್ನು ಹೆಚ್ಚಿಸಬೇ ಇವರಿಂದ ಇನ್ನೂ ಹಿರಿದಾದ ಕೃತಿಗಳು ಹೊರಬೀಳುವಂತೆ ಸಹೃ ಯತೆಯನ್ನು ತೋರಿಸಬೇಕು. ಇದೇ ನನ್ನ ಮನದಾಸೆ.

೩೦—೪—೧೯೫೩ ರಂ. ಶ್ರೀ. ಮು

ಬಿನ್ನಹ

ಜಹನಾರ ಮೊಗಲ್ ಚಕ್ರವರ್ತಿ ಷಹಜಹಾನನ ಮಗಳು, ಔರಂಗ-ಜೇಬನ ಸಹೋದರಿ. ಷಹಜಹಾನನ ಇಳಿವಯಸ್ಸಿನಲ್ಲಿ ಆತನ ಮೇಲೆ ದಂಗೆಯೆದ್ದು ಔರಂಗಜೇಬನು ದೆಹಲಿಯ ಸಿಂಹಾಸನವನ್ನು ಆಕ್ರಮಿಸಿ ತಂದೆಯನ್ನು ಸೆರೆಯಲ್ಲಿಟ್ಟು ಇತರ ಮೂವರು ಸಹೋದರರಾದ ದಾರ, ಷೂಜ, ಮುರಾದರನ್ನು ಕೊಲ್ಲಿಸಿ ತಾನೆ ದೇಶವನ್ನು ಆಳಲು ಮೊದಲು ಮಾಡಿದನಷ್ಟೆ. ಈ ಸಂದರ್ಭದಲ್ಲಿ ಜಹನಾರ ತಂದೆ ಷಹಜಹಾನನ ಮತ್ತು ಹಿರಿಯ ಅಣ್ಣ ದಾರನ ಪಕ್ಷವನ್ನು ವಹಿಸಿ ಅವರಿಗೆ ನೆರವಾಗಿ ನಿಂತುದರಿಂದ ಆಕೆಯನ್ನೂ ಔರಂಗಜೇಬನು ಬಂಧನದಲ್ಲಿಡಿಸಿದನು. ಜಹನಾರ ರಜಪೂತವೀರನೊಬ್ಬನನ್ನು ರಹಸ್ಯವಾಗಿ ಪ್ರೀತಿಸುತ್ತಿದ್ದಳು. ಆತ ಈಕೆಯ ರಕ್ಷಣೆಗಾಗಿ ಕಂಕಣತೊಟ್ಟು ಷಾಜಹಾನ ದಾರರ ಪಕ್ಷ-ವಹಿಸಿ ಔರಂಗಜೇಬನ ದಾಳಿಯನ್ನು ಎದುರಿಸಿ ವೀರಮರಣವನ್ನು ಪಡೆದನು. ಮುಂದೆ ಔರಂಗಜೇಬನಿಂದ ಬಂಧಿತಳಾದ ಜಹನಾರ ತನ್ನ ಕಡೆಯ ದಿನಗಳನ್ನು; ಸೆರೆಮನೆಯಲ್ಲಿಯೇ ಇದ್ದು, ತಂದೆ ಮಡಿದ ಸುದ್ದಿ-ಯನ್ನೂ ದಾಯಾದಿಗಳು ಹತರಾದುದನ್ನೂ ತನ್ನ ಪ್ರೀತಿಯ 'ರಕ್ಷಾ-ಬಂಧಿ' ಯುದ್ಧದಲ್ಲಿ ಮಡಿದುದನ್ನೂ ಕೇಳಿ, ಕಳೆದುಹೋದ ವೈಭವದ ದಿನಗಳನ್ನೂ ರಸನಿಮಿಷಗಳನ್ನೂ ನೆನೆನೆನೆದು; ಕೊನೆಗೆ ತತ್ವಚಿಂತಾ-ಸಕ್ತಳಾಗಿ ಶಾಂತಮನಸ್ಕಳಾಗಿ ಇಹಲೋಕವನ್ನು ತ್ಯಜಿಸುವಳು.

ಇದಿಷ್ಟು ಇತಿಹಾಸ. ಈ ಇತಿಹಾಸದ ತಡಿಕೆಯ ಮೇಲೆ ನನ್ನ ಊಹಾಪೋಹಗಳಿಂದ ತಿದ್ದಿ ಬೆಳೆಸಿದ ಕಲಾಕಲ್ಪಕತೆಯ ಕಾವ್ಯಲತೆ ಹಬ್ಬಿ ಹೊರವಾದ ಹಂದರವಾಗಿರುವುದನ್ನು ವಾಚಕರು ಗಮನಿಸ-ಬಲ್ಲರು. ಇತಿಹಾಸಕ್ಕೆ ವಿರೋಧವಾಗದಂತೆ ಜಹನಾರಳ ಕಡೆಯ ದಿನಗಳ ಚಿತ್ರ – ಮುಖ್ಯವಾಗಿ ಆಕೆಯ ಮನಃಪ್ರಪಂಚದ ಬಿಸಿಲು ಬೆಳುದಿಂಗಳುಗಳ ಚಿತ್ರ – ಇಲ್ಲಿ ಒಡೆದು ಕಾಣುವಂತೆ ಈ ನೀಳ್ಗವನ-ವನ್ನು ರಚಿಸಿದ್ದೇನೆ. ಇದರ ಮೇಲೆ ಎಲ್ಲಿಯಾದರೂ ಚಾರಿತ್ರಿಕ ಹಿನ್ನೆಲೆ ವಿರೋಧವಾಗಿರುವುದಾದರೆ ಇದು ಕಾವ್ಯವೆಂಬುದನ್ನೂ ಇಲ್ಲಿ ಚರಿತ್ರೆ

ಗೌಣ ಕಲ್ಪನೆ ಪ್ರಧಾನ ಎಂಬುದನ್ನೂ ವಾಚಕರು ಮರೆಯಬಾರದಾಗಿ ವಿನಂತಿ.

ಸಾಂಗ್ಲಿಯ ವಿಲಿಂಗ್ಡನ್ ಕಾಲೇಜಿನ ಪ್ರೊ|| ರಂ. ಶ್ರೀ. ಮುಗಳಿ, ಎಂ ಎ., ಬಿ.ಟಿ., ಅವರು ಈ ಕೃತಿಯನ್ನು ವಿಶ್ವಾಸದಿಂದ ಓದಿನೋಡಿ ತಮ್ಮ ಸಹಜಸುಂದರವಾದ ನುಡಿಮಲ್ಲಿಗೆಯ ಮುನ್ನುಡಿಯನ್ನು ಅನುಗ್ರಹಿಸಿದ್ದಾರೆ. ಅವರ ಈ ಮುನ್ನುಡಿಯ ಮಲ್ಲಿಗೆ ಮುಡಿದು ನನ್ನ ಕೃತಿ ಅಮೂಲ್ಯವಾಗಿದೆ. ಈ ಅನುಗ್ರಹಕ್ಕಾಗಿ ಶ್ರೀ ಮುಗಳಿಯವರಿಗೆ ನಾನು ಕೃತಜ್ಞನಾಗಿದ್ದೇನೆ.

ಮುದ್ರಣದ ಪ್ರತಿಯನ್ನು ಸಿದ್ಧಗೊಳಿಸುವುದರಲ್ಲಿ ಸಹಾಯಮಾಡಿದ ನನ್ನ ಸಹಧರ್ಮಿಣಿ ಸೌ|| ರಾಜಲಕ್ಷ್ಮಿಯ ಉಪಕಾರವನ್ನು ಇಲ್ಲಿ ಸಂತೋಷದಿಂದ ಸ್ಮರಿಸುತ್ತೇನೆ.

ಪುಸ್ತಕವನ್ನು ಎಂದಿನಂತೆ ಸಕಾಲದಲ್ಲಿ ಸುಂದರವಾಗಿ ಅಚ್ಚುಮಾಡಿರುವ ತುಮಕೂರಿನ ಶ್ರೀ ಪಾಂಡುರಂಗ ಮುದ್ರಣಾಲಯದ ವ್ಯವಸ್ಥಾಪಕರಿಗೆ ನನ್ನ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ.

೫—೫—೪೩
ತುಮಕೂರು

ಎಸ್. ವಿ. ಪರಮೇಶ್ವರಭಟ್ಟ

ಗತಿ ೧

ಕಾಲಚಕ್ರಭ್ರಮಣ ಪಥಮಧ್ಯದೊಳಗಿಂದು
ಸಂಕ್ರಾಂತಿ ಸಮಯದಲಿ ಸಿಲುಕಿರುವ ಹೇ ಜನನಿ !
ಜನ್ಮಭೂಮಿಯೆ, ತಾಯೆ ! ಓ ದೇವಿ, ಭಾರತಿಯೆ !
ಯಾಜ್ಞಸೇನಿಯ ತೆರದಿ ಮತ್ತೇಕೆ ನಾಂದಿರುವೆ
ರುಧಿರಾಭಿಷೇಕದಲಿ ? ಮತ್ತೇಕೆ ನಿಂದಿರುವೆ
ರಣಯಜ್ಞವೇದಿಯಲಿ? ಇನ್ನಾವ ಬೇಳ್ವೆಯಿಂ-
ದಾರಿಗಾಹುತಿಯಿತ್ತು ಏನ ನೀಂ ಪಡೆಯಲಿಹೆ ?
ಬಲಿ ನಿಂದು, ಆಹುತಿ ಮುಗಿದು, ಯಜ್ಞ ಕೊನೆಗೊಂಡು
ಕಂಕಣಂ ಕಳೆದೆಂದು ಮಂಗಳೋದಕ ಮಿಂದು,
ವಿಜಯಮಾಲಿಕೆ ಧರಿಸಿ ಕೃತಕೃತ್ಯಳೆನೆ ಮೆರೆದು
ಶುಭಮನೆಮಗೆಂದೀವೆ? ಸುಖಮನೆಮಗೆಂದೀವೆ?
ಸತ್ಯಮಂ ಧರ್ಮಮಂ ಜನದ ಕಲ್ಯಾಣಮಂ
ಶಾಂತಿಯಂ ದಾಂತಿಯಂ ದೇಶದೌನ್ನತ್ಯಮಂ
ಎಂದು ನೀಂ ಸಾಧಿಸುವೆ! ಜನಕೆ ಸದ್ಗತಿಯೀವೆ?
ಗುಡ್ಡಕಣಿವೆಗಳಲ್ಲಿ ವಿದ್ರೋಹಿಗಳ ಸೇನೆ
ಸೀಳಿಡುತೆ ಕೆರಳುತಿದೆ, ಕೆರಳಿ ಮುಂಬರಿಯುತಿದೆ.
ವಿಕ್ಷುಬ್ಧವಾರಿಧಿಯೊಳುಲ್ಲೋಲವಾದಂತೆ
ಕ್ರಾಂತಿಕಾರಕವಾತದಾಘಾತದಿಂದುಬ್ಬಿ
ಜಾನಪದ ಸಾಗರಂ ಕೆರಳಿ ಪ್ರತಿಭಟಿಸುತಿದೆ.
ಸೇನೆ, ಆತ್ಮವಿನಾಶ ಸೂಚಕೋನ್ಮಾದದಿಂ
ತಾಗುತಿದೆ. ಲಕ್ಷೋಪಲಕ್ಷಜೀವಿಗಳ ಬಲಿ
ಬೀಳುತಿದೆ. ಬೇಳುತಿವೆ ರಣಜ್ಞಕುಂಡದಲಿ
ಮೃತ್ಯುಮುಖ ದೇಹಿಗಳಸಂಖ್ಯಾತ ಸಂಖ್ಯೆಯಲಿ.

ಧರ್ಮಬಾಹಿರನಿಂತು ಕ್ರೌರ್ಯದಲಿ ನೆಲೆ ನಿಂತು
ದೇಶದಾದ್ಯಂತಮಂ ರಕ್ತಧುನಿಯೊಳಗದ್ದಿ
ಮಣಿಮಯಮಯೂರಸಿಂಹಾಸನದ ಲೋಭದಿಂ
ದಾಳಿಯಿಟ್ಟೈದಿದಂ ದೆಹಲಿ ಪರ್ಯಂತರಂ.
'ಯುದ್ಧದಲಿ ಗೆದ್ದಂದು ಗದ್ದುಗೆಯನೇರುವೆಂ
ಮಡಿದಂದು ಮಣ್ಣಡಿಯ ಗೋರಿಯೊಳಗುರುಳುವೆಂ
ಗೋರಿಯೋ ಗದ್ದುಗೆಯೊ ಒಂದನೆಂತಾದರುಂ
ಸಾಧಿಸದೆ ಬಿಡೆನೆಂದು ಪಣತೊಟ್ಟನೆಂ'ಬಂತೆ
ಸೋದರರ ತರಿದೊಟ್ಟಿ, ಬಂಧುಗಳನಿಲ್ಲೆನಿಸಿ,
ಪೊಗಲರ್ಥಿರಾಜನಂ ಭರತಚಕ್ರೇಶನಂ
ತಂದೆಯುಂ ಪೂಜ್ಯನಂ ಆರ್ಯನಂ ಸೆರೆಗೈದು
ಔರಂಗಜೇಬಂ ತಾನೆ ರಾಜನೆಂದೆನಿಸಿದಂ.

ಭಯಚಕಿತ ಜಾಪಷಹನಾತ್ಮರಕ್ಷಣೆಗಾಗಿ
ಕಟ್ಟಿದೀ ಪೆಗೋರ್ಟೆ, ಯುದ್ಧದಲಿ ಮಡಿದವರ
ಎದೆಬುಗ್ಗೆಯಿಂ ಚಿಮ್ಮಿ ಹರಿದ ಕೆನ್ನೆತ್ತರಿಂ
ನಾಂದಂತೆ ಕೆಂಬಣ್ಣದಿಂ ಕಣ್ಣಿಗತಿಭಯಂ-
ಕರವಾಗಿ ಸಾಮ್ರಾಜ್ಯದಾಹದ ಪೆಡಂಭೂತ-
ಮೆನೆ ನಿಂದು ತೋರುತಿದೆ, ನೋಡುವರ ಎದೆ ಮನಂ
ಕರಗಿ ಮೂರ್ಛಾವೇಗದಲಿ ಮೈಮರೆಯುವಂತೆ.
ಯಮುನೆಯು ಮಹಾಪೂರದಿಂ ಪದತಡಿಯ ಸುಳಿದು ತೆರೆ
ತೆರೆಯಾಗಿ ನೊರೆಗರೆದು ಕೆಂಪೇರಿ ಹರಿಯುತಿದೆ
ಮೊರೆಯುತೆ ನಿರಂತರಂ; ಮಾನವಂ ಗೈದಿರುವ
ಪಾಪದ ಕಳಂಕಮಂ ತೊಳೆದು ಪಾವನಗೈಯೆ
ಧರ್ಮಪುರುಷಂ ನಿಯೋಜಿಸಿದ ಯೋಗಿನಿಯಂತೆ.

ರುಧಿರಮಯಕೋಟೆಯಂ ಸ್ಪರ್ಶಿಸಿದ ಯಮುನೆಯುಂ
ತಾಮ್ರಲೋಚನೆಯಾಗಿ ಕೆನ್ನೀರ ಹೊಳೆಯಾಗಿ
ಪಾಪಿಗಳ ಪಾಪಮಂ ಘಾತುಕರ ಹತ್ಯಮಂ
ದ್ವೇಷಿಸುವಳೆಂಬಂತೆ ಓಡೋಡಿಹೋಗಿ ಕಡ-

ಲಾಣ್ಮಸಿಗೆ ನರನ ರಾಕ್ಷಸಬುದ್ಧಿಯಿಂದಾದ
ಕೆಂಗೊಲಿಯ ಚಿಹ್ನಮಂ ತೊಳೆವುದಸದಳವೆಂದು
ಮೊರೆಯಿಡುವಳೆಂಬಂತೆ ತೋರುತಿಹುದೆನಗಿಂದು.

ಯಮುನೆಯಾಚೆಯ ದಡದಿ ಬಿತ್ತರದ ಬಯಲಿನಲಿ
ತಾಜಮಹಲಿನ ಸಮಾಧಿಸ್ತೂಪದುತ್ತುಂಗ
ಸೌಧಂ ವಿರಾಜಿಸಿದೆ; ಸಾತ್ವಿಕಪ್ರೇಮದಾ-
ನಂದವ ನಿದರ್ಶನದ ಧವಳಗಿರಿಯೆಂಬಂತೆ!
ಆಮಹಾಶ್ವೇತ ಶೀತಳ ಸೌಧದಡಿಯಾಳದಲಿ.
ಭಾರತದ ಸಾಮ್ರಾಜ್ಞಿ ಷಾಜಹಾನನ ರಾಣಿ
ಮಾರನುಮನೆನ್ನುಮಂ ಪಡೆದಾ ಮಹಾತಾಯಿ
ಮೌನದಿಂ ಪವಡಿಸಿಹಳಾತ್ಮಸುಖ ನಿದ್ರೆಯಲಿ.
ಅಂತಹಳ ನಿದ್ರೆಯುಂ ಭಂಗಗೊಂಡಂತಾಗೆ
ಅವಳ ಮಕ್ಕಳೆ ಮಿಡಿವ ರುದ್ರವೀಣಾನಾದ-
ದುನ್ಮಾದದಿಂದಾಕೆ ಕೋಪದಿಂದುರಿವಳೆನೆ
ಹಗಲಿನಲಿ ಬಿಸಿಲಝಳದೆದುರಿನಲಿ, ಮೇಣಂತೆ
ಸಂಜೆಯಲಿ ಬೈಗುಗೆಂಪುರಿಯಲ್ಲಿ, ವಿಪ್ಲವದ
ಕ್ರಾಂತಿಪುರುಷಂ ತನ್ನ ಕೊಡಲಿಕಡೆಗೋಲಿಂದೆ
ರುಧಿರಾಬ್ಧಿಯಂ ಕಡೆಯೆ ನೊರೆನೊರೆದು ಕುದಿಗೊಂಡು
ಸಿಡಿದ ರಕ್ತಂ ಘನಿಸಿ ಉರಿವ ಹರಳಾದಂತೆ
ರಂಜಿಸುವುದಾಸೌಧ ರಮಣೀಯ ರೌದ್ರಮಂ
ಬೀರುತ್ತೆ ನೋಳ್ಪರಿಗಗುರ್ವಮದ್ಭುತವಾಗಿ!
ಅವಳ ಕರುಳಿನ ಬಳ್ಳಿ ಚಿಗುರಿ ದಾಂಗುಡಿಯಿಟ್ಟ
ಹಸುರುಹಂದರವಾಗಿ ಹೂವಾಗಿ ಹಣ್ಣಾಗಿ
ನೆರಳಿನಾಸರೆಯಾಗಿ ಹಬ್ಬುವುದನುಳಿದಿಂದು
ಕತ್ತರಿಸಿ ಬೀಳುತಿದೆ ಸೊರಗಿ ಸೊಪ್ಪಾಗುತಿದೆ
ಸೀದು ಕರಿಮುರಿಪೋಗಿ ಗಪ್ಪುಗಾರಾಗುತಿದೆ.
ಅವಳ ಹೃದಯೇಶ್ವರಂ ಸಕ್ಕರೆಯ ಸವಿಯೊಲುಮೆ-
ಯಕ್ಕರೆಯ ಎರೆಯನವನಿಲ್ಲಿ ಸೆರೆಸಿಲುಕಿಹಂ

ಮಗನೆ ಕಾರಣವಾಗಿ ಆಸನ ಚ್ಯುತನಾಗಿ
ವೈಭವಂಗಳ ನೀಗಿ ಭ್ರಷ್ಟಸಾಮ್ರಾಟನಾಗಿ
ಮೊದಲೆ ವಿಧಿ ಹತನಾಗಿ ಗತಭಾಗ್ಯನೆನಿಸಿರ್ದ
ಅವಳ ಮಗ ದಾರನುಂ ಕೈತವಕೆ ತುತ್ತಾಗಿ
ತಮ್ಮನಿಂ ವಿಷವುಂಡು ಮಡಿದು ಮಲಗಿಹನಿಲ್ಲಿ.
ಅವಳಿಲ್ಲ ನಂಟರುಂ ಮೇಣವಳ ಇಷ್ಟರುಂ
ಕತ್ತಲೆಯ ಕೋಣೆಯಲಿ ಯಾತನೆಯನನುಭವಿಸಿ
ನರಳುತಿಹರನುದಿನಂ ಮರಣದ ನಿರೀಕ್ಷೆಯಲಿ.
ಇಂತೆಲ್ಲರಂ ಕೊಲಿಸಿ ಇಂತೆಲ್ಲರಂ ಅಳಿಸಿ
ಅವಳ ಕಿರಿಮಗನಿಂದು ಬಾದಷಹನೆಂದೆನಿಸಿ
ಅರಸುಬೆಳ್ಗೊಡೆ ಮಕುಟ ಕರವಾಲಗಳ ಧರಿಸಿ
ಸಿಂಹಾಸನಂ ಏರಿ ಮಂತ್ರಿಸೇನಾನಿಗಳ
ಓಲಗದೊಳುರವಣಿಸಿ ಮೆರೆಯುತಿಹನವನಿಲ್ಲಿ.
ಪ್ರಜೆಗಳುಂ ಪೌರರುಂ ರಾಜಸಾಮಂತರುಂ
ಕ್ಷೋಭೆಗೊಂಡವರಾಗಿ ಕುದಿಯುತಿಹರೊಳಗೊಳಗೆ.
ಎಷ್ಟುದಿನವಿನ್ನಿಂತು ನಾವು ನವೆಯುವುದೆಂದು.
ಬಾಬರನ ಅಕ್ಬರನ ಷಾಜಹಾನನ ಬಳಿಕ
ಔರಂಗಜೇಬನವನೈತಂದು ಆ ಹೆಸರ
ಕೀರ್ತಿಯಂ ಕೆಡಿಸಿ ಅವಕಪಜಯದ ಮಸಿ ಬಳಿಯ-
ಲೆಂಬಂತೆ ಈತನನ್ಯಾಯದಿಂ ಭಾರತವ
ನಾಳುತಿಹನೆಂದು ಜನ ಮರುಗುತಿದೆ ಭಯದಿಂದೆ.
ಷಾಜಹಾನನ ಬಳಿಕ ಭಾರತವ ಬೆಳಗುವರೆ
ದಾರನೆ ವಲಂ ತಕ್ಕನೆಂದೆಲ್ಲರಾಡಿವರ್!
ಆತನ ಮಹೋನ್ನತಿಯನೇನೆಂದು ನೆನೆದಪರ್!
ಅವನ ದಯೆಯನುಪಮಂ ಅವನ ಕ್ಷಮೆಯಸದೃಶಂ
ಅವನ ದೈವಪ್ರೇಮ ಅವನ ಧರ್ಮೋತ್ಸಾಹ-
ವೊಂದೊಂದುಮದ್ಭುತಂ, ಅನ್ಯತ್ರ ದುರ್ಲಭಂ
ಇಂತೆಂದು ಪಾಡುವರ್ ಪೊಗಳುವರ್ ಜನ ನಿಂದು.

ಆವರೇನೆಸಗಿಂದು ಆತ ದೊರಕುವನೇನು?
ರಜಪೂತರುಂ ಮೊಗಲರುಂ ಕೂಡಿ ಒಂದಾಗಿ
'ಭಾರತೀಯರು ನಾವು' ಎನುವ ಅದ್ವೈತಮುಂ
ದಿನದಿನದ ಲೋಕಾನುಭವದಿಂದಲಾರ್ಜಿಸುತೆ
ರಾಷ್ಟ್ರಕಲ್ಯಾಣಮುಂ ಸಾಧಿಸುವ ಸದ್ಬುದ್ಧಿ
ಆತನೊಡನೆಯೆ ಸಂದು ಮಣ್ಣಾಗಿಹೋದತ್ತು,
ಇನ್ನೆಮಗೆ ಬೆಳಕೆಲ್ಲಿ! ಗೆಲುವೆಲ್ಲಿ! ಚೆಲುವೆಲ್ಲಿ!
ಅಮರ ಪದವಿಯಗಳಿಸಿದಮೃತಲೋಕದ ತಾಯೆ!
ಅಳಿಯದಳೆ! ಓದೇವಿ! ಮೃಣ್ಮಯರು ನಾವು ನ-
ಮ್ಮೀನೋವಿನರಿವಹುದೆ ನಿನಗಲ್ಲಿ? ಈಬಗೆಯ
ನಾರಕಿಗಳುತ್ಕಟದ ರೋದನಂ ನಿನಗಲ್ಲಿ
ಕೇಳುವುದೆ? ಕೇಳಿಸಿದರೇಕಿಂತು ಮೌನದಿಂ
ನಿದ್ರಿಸಿಹೆ? ಏಳು ಎಚ್ಚರವಾಗು, ಮಕ್ಕಳಿಗೆ
ಸದ್ಬುದ್ಧಿಯನ್ನಿತ್ತು ಮೊದಲೆಂತೊ ಮತ್ತಂತೆ
ಭಾರತಂ ಸತ್ಯಧರ್ಮಂಗಳಿಂ ಸದ್ವಿದ್ಯೆ
ಕಲೆಗಳಿಂ ಕುಶಲಕರ್ಮಂಗಳಿಂ ಪ್ರೇಮದಿಂ
ಬೆಳಗುವಂದದಿ ಮಾಡು ಕಣ್ದೆರೆದು ನೋಡಮ್ಮ!
ನಮ್ಮವರ ಬೇನೆಬೇಸರಗಳ ನಿವೇದಿಸುತೆ
ಶೋಕದಿಂ ಮತ್ತೆ ಉದ್ವೇಗದಿಂ ನುಡಿದೆನ್ನ
ಮನ್ನಿಸುತೆ ಕಾಪಾಡು; ನಿನ್ನ ಮಗಳಾಂ ನೋಡು
ಅಡಿಗೆರಗುತಿಹೆನಿದೋ ಹರಸು ಅಭಯವನಿತ್ತು
ಹೃದಯದೌತ್ಸುಕ್ಯಮಂ ನೀಗಿ ಮನಸಿಗಾಹ್ಲಾದವಾಗಿ.

ಗತಿ ೨

ಅಂಗುರೀಬಾಗಿನುದ್ಯಾನದೊಳಗಿಂದೀಸು
ಹಿಂದೆಂದು ಕಾಣದಿಹ ಸೌಂದರ್ಯ ಸೂಸುತಿದೆ.
ಮಧುಮಾಸದಾನಂದ ಮೈವೆತ್ತು ತೋರುತಿದೆ.
ಚಿತ್ರಚೈತ್ರೋತ್ಸವದಿ ಸೃಷ್ಟಿ ನಲಿದಾಡುತಿದೆ.
ಚಿಗುರಿರುವುದಾವ್ರವನ ಸಿಪಿರಿ ನನೆಕೊನೆಪ್ರಾಗಿ
ಮನ್ಮಥೋತ್ಸವಕೆಂದು ನಿಂದ ತೇರೇಬಂತೆ.
ಕೊಂಬೆಕೊಂಬೆಗೆ ಕುಳಿತ ಪಕ್ಷಿಪರಿಷನ್ಮೇಳ
ಜೇನ್ದನಿಯೊಳುಲಿಯುತಿದೆ ಸುಗ್ಗಿ ಸನ್ನಿಹಿತವೆನೆ.
ಬಳಿಯೆ ಜಲಜಲನುಕ್ಕಿ ಹರಿವ ಕಾಲುವೆ ಜಲಂ
ಅಲೆಯ ಸುಳಿಸುಳಿಗೂಡಿ ನೊರೆಗರೆದು ರಚಿಸುತಿದೆ
ಚೆಲುವುಸಿಂಗಾರದಿಗೆಯುನರಸಂಚೆಯೋಲಗಕೆ.
ಭೃಂಗರಾಜನ ಬರವಿಗಣಿಗೈವಳೆನೆ ಪದ್ಮೆ
ದಳಸಹಸ್ರಂ ಅರಳಿ ನಿಂದಿರುವಳೀಯೆಡೆಯೆ.
ಪಚ್ಚೆ ಹಾಸಿದ ಹಸುರು ಹುಲ್ಲುಕಾವಣಗಳಲಿ
ಬಿಳಿ ಕರಿಯ ನೀರ್ವಕ್ಕಿ ನೆರೆದೊಂದು ಗುಂಪಾಗಿ,
ಸೌಂದರ್ಯಲಕ್ಷ್ಮಿಯಂ ಸ್ವಾಗತಿಸಿ ಕರೆದಿತ್ತ-
ಲ್ಲೈತರುತೆ ಪಾದಾವಧಾನವನ್ನೋದುತಿದೆ.
ಅತ್ತ ಹೂವರಳಿರುವ ಗಿಡಮರಂಗಳ ತೂಗಿ
ಉಯ್ಯಾಲೆಯಾಡುತಿದೆ ಗಾಳಿ ಜೋಗುಳ ಹಾಡಿ.
ಬೀಸಿಬರುತಿಹುದಂತೆ ಪುಷ್ಪಪರಿಮಳಧೂಳಿ
ಸುಖದ ಸುಗ್ಗಿಯ ಬರವ ಸಾರ್ವ ಹರಿಕಾರನೆನೆ.
ಬಣ್ಣಬಣ್ಣದ ಚಿಟ್ಟೆ ನೂರೊಂದುಸಲ ಬಂದು

ಸವಿಮುತ್ತನೊತ್ತುತಿದೆ ಹೂವುಹೂವಿಗೆ ಕುಳಿತು.
ಅಧರಧರ ಚುಂಬನಕೆ ದಳದಳ ವಿಕಂಪಿಸುತೆ
ಸರ್ವಾರ್ಪಣಂಗೈದು ಸುಮವರಳಿ ನಿಲ್ಲುತಿದೆ.
ಗಿಡವಲ್ಲಿ ಮರದಲ್ಲಿ ಹೂವಿನಲಿ ಹಸುರಿನಲಿ
ಹಕ್ಕಿಯಿಂಚರವಲ್ಲಿ ಹಳ್ಳದಲಿ ಹೊಲದಲ್ಲಿ
ಜಲವಲ್ಲಿ ನೆಲವಲ್ಲಿ ಎಲ್ಲಿ ನೋಡಿದರಲ್ಲಿ
ಅಂಗುರೀಬಾಗಿನೊಳು ಚೆಲುವಿಂತು ಸೂಸುತಿದೆ.
ಇಳೆಹೊತ್ತಿನಲಿ ನೋಡಲೀತಾಣದೀ ಚೆಲುವು
ಇಮ್ಮಡಿಸಿ ತೋರುತಿದೆ. ನೆಲದ ಚೆಲುವಿನ ಜೊತೆಗೆ
ಬಾನ ಚೆಲುವೂಕೂಡಿ ಒಂದಾದುದೆಂಬಂತೆ.
ಭೂಲೋಕದಲಿ ನೆಟ್ಟ ಪಾರಿಜಾತಂ ಅರಳಿ
ಪರದ ಸೌರಭ ಸೂಸಲಾನಂದವಿಮ್ಮಡಿಸಿ
ತೋರ್ಪಂತೆ, ದೈವಸಾನ್ನಿಧ್ಯದಲಿ ಭಕ್ತಗಣ
ಕಳೆಯೇರಿ ನಿಲುವಂತೆ, ಪತಿದೇವನೆದುರಿನಲಿ
ಸತಿಯಾತ್ಮ ಹೊಳೆವಂತೆ, ಅಸ್ತಗಿರಿಯಾಚೆಯಲಿ
ರತ್ನದೀಪಸ್ತಂಭದಂತೆ ರವಿ ಬೆಳಗುತಿರೆ,
ನೂತ್ನಶೋಭೆಯಿನೆಸೆದು ಸಂಧ್ಯೆ ನೈದೋರುತಿರೆ,
ದೇದೀಪ್ಯಮಾನೆ ತೋರ್ವ ಸ್ವರ್ಗಸೌಂದರ್ಯದಲಿ
ತಿರೆ ಬೆಳಗಿ ನಿಂದಿಹುದು ಅತ್ಯಧಿಕ ಕಾಂತಿಯಲಿ.
ಈಬೆಳಕು ಈಕಾಂತಿ ಈಬೆಡಗು ಈಬಣ್ಣ
ಈಚೆಲುವಿನಾಲೋಕವೀಸೊಬಗಿನಾನಂದ
ಅವುದೋ ಹಳೆಯ ಸವಿನೆನಪುಗಳ ಕೆರಳುತಿವೆ.
ಒಗೆಯ ಬಾಸಂಗಳದಿ ಸ್ಮೃತಿಯ ಪಟಲದ ಮೇಲೆ
ನೂರಾರು ಕಲ್ಪನೆಯ ದೃಶ್ಯಜ್ಯೋತಿರ್ಮಾಲೆ
ಹೃದಯಾಂತರಾಳದಿಂದೊಗೆದು ಮಿನಮಿನ ಮಿನುಗಿ
ಮೂಡಿಬರುತಿಹುದಿಂದು ಎನಗಾದಿನಂ ಸಂಜೆ
ಪ್ರಿಯತಮನ ಪ್ರಥಮ ಸಂದರ್ಶನೋತ್ಕರ್ಷದಿಂ–

ದಾದ ದಿವ್ಯಾನಂದದನುಭವದ ಸವಿನೆನಪು.
ಇಂತಹುದೆ ಸಂಜೆಯಲಿ ಅಂದಿದುವೆ ತೋಟದಲಿ
ಇಲ್ಲಿಗೈದಿದನಾತನೆನ್ನರಕ್ಷಾಬಂಧಿ.
ರಜಪೂತಪುಂಗವನ ನಾನಂದೆ ನೋಡಿದುದು.
ಜೇನೆಯ್ಯವೋಲಿನಿದು ಆಗಳಾದನುಭವಂ
ಅದನು ನೆನೆದೊಡನಿಂದು ದೇಹ ಗುಡಿಗಟ್ಟುವುದು,
ಕಣ್ಣು ಹನಿಗೂಡುವುದು, ಆನಂದವುಕ್ಕುವುದು.
ಮತ್ತವನೆ ಕಣ್ಣೆದುರೆ ಬಂದಂತೆ ನಿಂದಂತೆ
ನುಡಿದಂತೆ ನಡೆದಂತೆ ಭಾಸವಾಗುವುದೆನಗೆ.
  ಪ್ರೇಮದಂಜನ ಬಳಿದ ಬಗೆಗಣ್ಣು ತೆರೆಯುತಿದೆ
ಕಾಣಿಸುವನೆನ್ನಿನಿಯನೆನ್ನ ರಕ್ಷಾಬಂಧಿ.
ನೋಡು ನೋಡಾತನಂ ರಜಪೂತ ವೀರನಂ!
ಆರ್ಯಧರ್ಮೋದ್ಧರಣಕೆಂದು ಕೈಯೆತ್ತಿಹಂ.
ದ್ರೋಹಿಯುಚ್ಚಾಟನಕ್ಕೆಂದು ಅಸಿಯೆಳೆದಿಹಂ.
ಶತ್ರುಹನನೋತ್ಕರ್ಷಕೆಂದು ಹಯವೇರಿಹಂ.
ಎನ್ನಂತೆ ಆತನುಂ ಪೌರುಷ ಪ್ರಣಯಿಯೆನೆ
ಭೀಮ ಬಂಧುರ ಮಹೋನ್ನತನಾಗಿ ತೋರಿಹಂ.
ಆತನಸಮಾನನತಿಸುಭಗನಪ್ರಾಕೃತಂ.
ಕವಿ ಗಮಕಿ ಗಾಯಕರ್ ಹೆಂಜೇಡಿಗಳವೋಲು
ಕಾವ್ಯಗಾಯನ ಚಿತ್ರನೃತ್ಯಸಂಗೀತದಿಂ
ಮಾನಗೌರವಗಳಂ ಗಳಿಸಲೆಂದಾಶಿಸುತೆ
ಅರಸನಾಸ್ಥಾನಮನ್ನರಸಿ ಬರುತಿರಲಿತ್ತ
ಅತ್ತಲೆನ್ನಿನಿಯ ತಾಂ ಕಪ್ಪುಕುದುರೆಯನೇರಿ
ಬಿಲ್ಲು ಬಾಣ ಗುರಾಣಿ ಬತ್ತಳಿಕೆಗಳ ಕೊಂಡು
ಮಾರಣದ ಯಜ್ಞದಧ್ವರ್ಯುವೆನೆ ನಡೆಯುವಂ
ರಣರಂಗದೆಡೆಗಾಗಿ. ಅವನಂಥ ವೀರರಿಂ
ಭಾರತಕೆ ಸುಖವಹುದು; ರಾಷ್ಟ್ರದುನ್ನತಿಯಹುದು.

ಏನೇನನೋ ಇಂತು ಯೋಚಿಸುತ್ತಿರುವಂದು
ಆವುದೋ ಅಸ್ಪಷ್ಟದನಿಗೇಳಿದಂತಾಗೆ
ತಿರುಗಿದೆಂ. ಕಿವಿಯರಳಿ ಕೇಳಿದೆಂ, ಕಣ್ಣರಳಿ
ನೋಡಿದೆಂ. ಆಕಾಶಮಂಟಪದೊಳದೆತಾನೆ
ದೀಪಹಚ್ಚಿತು ತಾರೆ, ಬಳ್ಳಿವನೆಯಿಂದದುವೆ
ತೀಡಿದುದು ಸೌರಭಂ, ಹೊಳೆ ಹರಿದು ಜಾರಿದುದು
ಹಕ್ಕಿ ಹಾರಿತು ಹಾಡಿ ನಿನಗೆ ಶುಭಮಹುದೆಂದು.
ನವನವೋನ್ಮೇಷಶಾಲಿನಿಯುಷ್ವ ಸೃಷ್ಟಿರತಿ
ಬಹ್ವರ್ಥಗರ್ಭಿತೆಯು ದಿಟವೆಂದು ಬಗೆಯುತಿರೆ
ಆನತಿದೂರದ ನಿಕುಂಜದೆಡೆಯುತ್ತಣಿನದೋ
ಚಿಮ್ಮಿದುದು ಕೆಂಧೂಳಿ. ಖುರಪುಟದ ದನಿಕೇಳಿ
ಚಿಮ್ಮಿದೆಂ ಏನೆಂದು ನೋಡಲೆಂದಾಶಿಸುತೆ,
ಕೈಗೆಬಂದಾವ್ರತರುಶಾಖೆಯಂನೆಮ್ಮಿ ನಾಂ.
ಕಾಣಿಸಿತು ಹಯವಿಳಿದು ಧಾವಿಸುತಲೈತರುವ
ಪ್ರೇಮಮೂರ್ತಿ. ಹಿರಿಹಿರಿಹಿಗ್ಗಿ ಆತನೆ ನಿಜಂ
ಎಂದು ಸಾನಂದದಿಂ ಮೈಮುರಿದು ಬೀಳುವೊಲು
ಮೊಳಕಾಲನೂರಿದೆಂ. ಆತನಡಿದಾವರೆಯೊ–
ಳಿನ್ನಕುಂತಳದುಂಬಿ ನಿಶ್ಚಿಂತೆಯಿಂದಲೆನೆ
ನೆಲೆಸಿದುದು ನಿಶ್ಚಲಂ.
ಮುಂದೇನ ಪೇಳುವೆಂ!
ಮನಸಿನಲಿ ಕನಸಿದ್ದುದಿಲ್ಲಿ ನೆನಸಾದುದೆನೆ
ಕಪ್ಪುಕುದುರೆಯನಿಳಿದು ಬಳಿಬಂದ ಇನಿಯನಂ
ನೋಡಿ ಪುಳಕಂಗೊಂಡು ಮೈಬೆವರಿ ಮನ ಬಳಲಿ
ಹೃದಯದುದ್ವೇಗದಲಿ ರಕ್ತ ಬಿಸಿಯಾಗುತಿರೆ,
ಅಂತರ್ವದನೆಯಾಗಿ ಬಾಗಿನಿಂತೆನು ಬರಿದೆ.
ಎನ್ನಿರವನವಲೋಕಿಸುತ್ತಿನಿಯನಿಂತು ಸಂ–
ತಪಿಸಿದನು ಮಾತಿನಲಿ ಸುಡಿನುಡಿಗೆ ಜೇನಿಟ್ಟು:

“ಓದೇವಿ! ಜಹನಾರಬೇಗಮಳೆ! ಬಳಿಗೆ ಬಾ,
ಕೊಳದ ನೀರ್ಗಾದಿಗೆಯೊಳರಸಂಜೆ ಕುಳಿತಂತೆ
ಅಮೃತಶಿಲೆಯಂಚಿನಲಿ ನಿಶ್ಚಿಂತೆಯಿಂ ಕುಳಿತು
ನಿನ್ನಮರಗಾಯನದಿನೆನ್ನೆದೆಯು ಸಂತವಿಸು.
ಔರಂಗಜೇಬನಾಣತಿಯಿಂದೆ ದೇಶದಲಿ
ಗಾಯನವೆ ಇಲ್ಲವಾಗಿದೆಯಂತೆ. ಆದರೇಂ!
ನವಿಸ್ಮಾರ್ರ್ವರೀಗಾನ ಸ್ವರ್ಗಲೋಕದ ಗಾನ.
ಗಂಧರ್ವಗಾನಮುನ್ನಿದನಾಗದೆನ್ನಲಿಕೆ
ಭೂಲೋಕದಾಳರಸ ಬಾದಷಹಗಳವಲ್ಲ.
ಗಂಧರ್ವರಂತಾವು. ಹಾಡುವುದೆ ನಮ್ಮ ಗುರಿ.
ಜಹನಾರ! ನಿನ್ನಮೃತಗಾಯನದಿನೆನ್ನೆದೆಗೆ
ರಸವೂಡು! ರಣದಿಂದ ತಂದಿರುವ ವ್ರಣಮಯದ
ದೇಹಮಂ ನಿನ್ನ ಪ್ರೇಮಾಮೃತದ ಮಧುರಿಮೆಯು
ಗಾನಲಹರಿಯೊಳೊಮ್ಮೆ ಮಿಸಿಸು ಮುಳುಗಿಸಿ ನಲಿಸು.
ಮರೆವೆನಾ ನೋವುಗಳ ಮರೆವೆನಾ ಪರುಗಳ.
ಜೇನಿಂಚರಂಗೈದು ಸೊದೆಗರೆದು ದನಿಗೂಡು.
ಕಾತರಿಪುದೆನ್ನ ಎದೆ, ಕಳವಳಿಪುದೆನ್ನ ಮನ,
ತಣಿಸು ಬಾ ಮುದವೂಡು.”
ಬಳಿಕರೆದು ಬರಸೆಳೆದು
ಅರಸನಿಂತಾದರಿಸೆ, ಮೆಲ್ಲಮೆಲ್ಲನೆ ಸರಿದು
ಹಾಲುಗಲ್ಲಿನ ಮೇಲೆ ಕುಳಿತಾನು ಹಾಡಿದೆನು.
ಗಾನದಾನಂದದಿಂ ಪರವಶತೆಯೊಂದಿದೊಲು
ಚಿನ್ಮಾನ ಮುದ್ರೆಯಲಿ ಆತ್ಮಸುಖನಿದ್ರೆಯಲಿ
ಮನದಾಣ್ಮನಿರ್ದನು ನಿರಾಳ ನಿಶ್ಚಿಂತೆಯಲಿ!
ನಾನುಮಂತಾತನವೊಲಾನಂದದಿಂ ಮುಂದೆ
ಭೌಮಾನುಭವದಿಂದೆ ಭಾವಪರವಶಳಾದೆ.
ಅದ್ವೈತಭಾವದಿಂದಾತ್ಮಸಮರಸಗೊಂಡು

ಶಾಶ್ವತದ ಶಿವಸುಖಂ ಕಂಡ ರಸಪೂರ್ಣರೆನೆ
ಅವಧಿಯುಗವಿಲ್ಲದೆಯೆ ಸುಖಿಸಿದೆವು ನಾವಂದು
ಶಾಂತಿಯಂ ತಾಳಿ ಕಾಲನನೆ ಮೂದಲಿಸಿದಂತೆ!
ಕರ್ತವ್ಯಭಾರದಿಂದೆನ್ನರಕ್ಷಾಬಂಧಿ
ಹೊರಡಲನುವಾಗುತಿರೆ ನುಡಿದನೆನಗಿಂತೆಂದು:
"ಯೋಧಪುರದರಸರಲಿ ಪಿಳ್ಳೆಯೊಂದುಳಿದಿರಲಿ,
ಅದರ ಶಿಶುಹೃದಯದುಸಿರಾಡುತಿರುವನ್ನೆಗಂ
ನಮ್ಮರಸು ಮನೆತನದ ಕ್ಷಾತ್ರದೀಪಸ್ತಂಭ
ಕುಸಿಯಲಾರದು ದೇವಿ, ನಂದಲಾರದು ದೀಪ!
ಇಂಗಲಾರದು ತೈಲ; ದೇದೀಪ್ಯಪ್ರಭೆಬೀರಿ
ಪ್ರಜ್ವಲಿಸಿ ಬೆಳಗುವುದು. ಅಷ್ಟು ಸತ್ವೋನ್ನತಂ
ನಮ್ಮ ಕ್ಷತ್ರಿಯ ಜನ್ಮ." ಇಂತುಸುರಿ ಕಟಿಬದ್ಧ
ಕರವಾಲವಂ ಸೆಳೆದು ಝಳಪಿಸುತೆ "ಇದೊ ನೋಡು!
ನಿನ್ನ ಮಾನ್ಯತೆಗಾಗಿ ಮತ್ತೆ ಗೌರವಕಾಗಿ
ಸುರಗಿಯೆಳೆದಿಹೆನಿಂದು, ಸಮರದಲಿ ಗೆಲುವೆಂದು.
ಹೋಗಿಬರುವೆನು ನಾನು, ಕೋರು ಜಯಸಿದ್ಧಿಯಂ."
ಎಂದಾತನಾಡಿದಂ. ಅವನುಸಿರು ಬಿಸಿಯಿತ್ತು,
ಮೈರಕ್ತ ಕುದಿದಿತ್ತು, ಪ್ರಜ್ಞೆ ಕಾವೇರಿತ್ತು,
ನಾನು ನುಡಿವೆನಿತರೊಳೆ ಮತ್ತೆ ಇಂತುಸುರಿದಂ.
"ಜಹನಾರ! ಕ್ಷಾತ್ರರಕ್ತವು ಹರಿವ ನಿನ್ನೆದೆಯೊ
ಳಳಿಸಿದೆಯೆ ಮೇವಾರ ಸಾಮರನ ಸವಿನೆನಪು!
ದೆಹಲಿ ಅಜ್ಮೀರುಗಳ ರಕ್ಷಿಸುವ ಕಾರ್ಯದಲಿ,
ವಿದ್ರೋಹ ಮುಸಲರನ್ನೆದುರಿಸಲು ಹೋದಾತ
ಮೇಲಂತರಿಕ್ಷದಲಿ ಅಪ್ಸರೆಯನೊರ್ವಳಂ
ಸಂದರ್ಶನಂಗೈಯೆ ನುಡಿದಳವಳಿಂತೆಂದು:
'ಓ ಅರಸೆ! ಧರ್ಮಪ್ರಭು! ಸಮರಸಂರಂಭದಿಂ-
ದಾರ್ಯಧರ್ಮೋದ್ಧಾರಕಾರ್ಯದಲಿ ತೊಡಗಿರುವ

ನೀನಿಂದು ಧನ್ಯನೈ. ಶತ್ರುಗಳನೆದುರಿಸುತೆ,
ಧೈರ್ಯಶೌರ್ಯೋತ್ಸಾಹಗಳ ತೋರಿ ರಣದಿ ಮಡಿ.
ಚಿಂತಿಸದಿರಲ್ಲಿ ನಿನಗಿಂದ್ರನರ್ಧಾಸನಂ
ದೊರಕುವುದು. ಮೇಣಿಲ್ಲಿ ಸತ್ಕೀರ್ತಿ ಲಭಿಸುವುದು;
ಇಂತುಸಿರಿ ಅಪ್ಸರಸೆ ಸೈಗರೆಯೆ ನೃಪತಿಗಾ
ದಿವ್ಯಸಂದೇಶದಿಂದಾವೇಶವಿಮ್ಮಡಿಸೆ,
ರಣರಂಗಕೈದಿದಂ. ಕಾದಿ ಮಡಿದಂ. ಪಡೆದ-
ನಿಂದ್ರನರ್ಧಾಸನವನಂತಮಮಳ ಕೀರ್ತಿಯುಂ."
ಮಾತು ನಿಲ್ಲಿಸಿ ಮೌನವಂತಾಳಿದನು ಎನ್ನಿನಿಯ.
ಒಳನೋಟವನು ಬೀರಿ ಮೌನದಲಿ ನುಡಿವಂತೆ
ನೋಡುತಿದ್ದನು ಎನ್ನ. ನಾನುಮಂತವನನ್ನೆ
ನೋಡುತಿದ್ದೆನು. ಅಂದೊಬ್ಬರೊಬ್ಬರನಿಂತು
ನೋಡಿದೆವು ಬಹುಹೊತ್ತು. ಬಳಿಕ ಮೌನವನುಳಿದು
ಎನ್ನೆದೆಯ ಇಂಗಿತವನಿಂತಾಡಿದೆನು ನಾನು:
"ಯೋಧಪುರದೋ ಅರಸೆ! ಎನ್ನ ರಕ್ಷಾಬಂಧು!
ಕೇಳು ನನ್ನೀಮಾತ, ಆ ಕನೂಜಿನರಾಣಿ
ಸಂಯೋಗಿನೀದೇವಿ-ಹೆಸರ ಕೇಳಿಹೆ ಬಲ್ಲೆ-
ತನ್ನ ಪತಿ ಕಾಳಗಕೆ ಹೊರಟಿರಲು, ಬೀಳ್ಕೊಳುವ
ಸಂಭ್ರಮದೊಳಾಕೆ ಹೇಳಿದ ಮಾತು ನೆನಪಿದೆಯೆ?
'ಕಾಳಗದೊಳರಿಯೊಡನೆ ಹೋರಾಡಿ ಮಡಿದಂದು
ನಿನಗಾಗಿ ಕಾದಿಹುದು ಸ್ವರ್ಗ ಪರಲೋಕದಲಿ!
ಅಲ್ಲದಿರೆ ಯುದ್ಧದಲಿ ಶತ್ರುವನೆ ಚೆಂಡಾಡಿ
ವಿಜಯಮಾಲಿಕೆ ಧರಿಸಿ ಪುರಕೆ ಹಿಂದಿರುಗುವರೆ,
ನಿನಗಾಗಿ ಕಾದಿಹೆನು ಸ್ವರ್ಗನಿಭ ಧಾಮದಲಿ.
ಅಡಿಯ ಮುಂದಿಡು ನುಗ್ಗು ಅಡಿಗಶ್ವಮೇಧ ಫಲ.
ಅರಿಯ ಮುಂಗಡೆ ನುಗ್ಗು ಮತ್ತಶ್ವಮೇಧ ಫಲ.
ಅಸಿಯ ಹಿರಿದರಿಯನಿರಿ ಮತ್ತಮರಲೋಕ ಫಲ.

ನನ್ನಮರೆದಿಹನ ತೋರೆ ದೇವೇಂದ್ರಸಿರಿಯಹುದು.
ನಿನ್ನ ತಾಯಿಯ ನೆನೆದು, ಜನ್ಮಭೂಮಿಯ ನೆನೆದು,
ರಾಷ್ಟ್ರದೇಳಿಗೆಗಾಗಿ, ದೇಶದುನ್ನತಿಗಾಗಿ,
ಸತ್ಯವೊಂದನೆ ನಾನು ಉದ್ಧರಿಸುವೆಂ ಎಂದು,
ಧರ್ಮವೊಂದನೆ ನಾನು ಉದ್ಧರಿಸುವೆಂ ಎಂದು,
ಸ್ವಾತಂತ್ರ್ಯ ನಮಗೆಂದು ನಡೆಮುಂದೆ ಯುದ್ಧಕ್ಕೆ.'
ಇಂತೆಂದು ನುಡಿದು ಸತಿ ಬೀಳ್ಕೊಂಡಳಿನಿಯನಂ.
ಅಪ್ಸರೆಯ ಮಾತಲ್ಲ, ಅಶರೀರವಾಕ್ಕಲ್ಲ,
ಮೇಲಂತರಿಕ್ಷದಲಿ ತೋರಿ ಮೈಗರೆದವಳ
ನುಡಿಯಲ್ಲ; ವೀರ ಭಾರತಮಾತೆಯುದರದಲಿ
ಪುಟ್ಟಿ ಹೆಸರಾದೊಬ್ಬ ವೀರಕ್ಷತ್ರಿಯರಮಣಿ,
ಯುದ್ಧವಾರ್ತೆಯ ಕೇಳಿ ಮೈಯುಬ್ಬಿ ಮನವುಬ್ಬಿ
ಆವೇಶ ಬಂದಂತೆ ಕ್ಷೋಭೆಗೊಂಡವಳಂತೆ
ಪತಿದೇವನಂ ಕುರಿತು ಧುರವೀಳ್ಯವನ್ನಿತ್ತು
ನುಡಿದಮಾತಿದು ಇನಿಯ!" ಹೇಳಹೇಳುತೆ ನಾನೆ
ತಾಳುತಾವೇಶಮಂ ಮತ್ತೊಂದೆನಾಕ್ಷಾತ್ರ
ರಮಣಿಯ ಚರಿತ್ರೆಯಂ ಆ ರುದ್ರವೀಣೆಯಂ
ಮಿಡಿಯುತಾಲಾಪಿಸಿದೆನಾ ವೀರಗಾನವಂ.
"ಯುದ್ಧದಲಿ ಪತಿ ಮಡಿಯೆ ಸಂಯೋಗಿನೀದೇವಿ
ಯೋಗಿನೀಪುರದಲ್ಲಿ ಚಿತೆಯನಣಿಮಾಡಿದಳು.
ಅರಮನೆಯ ಮುಂಗಡೆಯೆ ನೆರೆದೆಲ್ಲಮಂದಿಯಂ
ಸಂಬೋಧನಂಗೈದಳಿಂತೆಂದು: 'ಆತ್ಮಬಲಿ-
ದಾನದಿಂ ರಕ್ತತರ್ಪಣನಿತ್ತು ಋಣಮುಕ್ತ
ನಾದನೆನೆ ಪತಿ ಮಡಿದು ಸೇರಿದನು ಸ್ವರ್ಗವಂ.
ಪತಿಯನುಳಿದನ್ಯತ್ರ ಗತಿಯಿಲ್ಲ ಸತಿಗೆಂದು
ಅವನೆಡೆಗೆ ಪೋಗುವೆಂ, ನಶ್ವರದ ದೇಹವಂ
ಅಗ್ನಿಗಾಹುತಿಮಾಡಿ.' ಚಿತೆಯನೇರಿದಳಾಕೆ.

ಮರುಗಿದುದು ಮಂದಿ ಕಣ್ಣೀರ್ ಮಿಡಿದು. ಪತಿಯೆಡೆಗೆ
ತೆರಳಿದಳು ಆತಾಯಿ ಜಗದಕಣ್ಮರೆಯಾಗಿ."

ಕಥೆಹೇಳಿ, ಅರೆಚಣಂ ನಿರ್ನಿಮೇಷಾಕ್ಷಿಯಿಂ—
ದೀಕ್ಷಿಸುತೆ ಪತಿದೇವನಂ, ಕೇಳಿದೆನು ಇಂತು:
“ಇಲ್ಲಿ ಈಲೋಕದಲಿ ಒಲಿದೆರಡು ಜೀವಿಗಳು
ಅಲ್ಲಿ ಆ ಲೋಕದಲು ಒಂದೆಡೆಗೆ ಸೇರುವರೆ?”
ನನ್ನ ಇಹಪರದೆಲ್ಲ ಕನಸುನನಸುಗಳೆಲ್ಲಿ
ಈಯೊಂದು ಪ್ರಶ್ನೆಯಲಿ ಘನಿಸಿ ಹರಳಾದಂತೆ
ಕೇಳಿದೆನು ಇನಿಯನಂ. ಆತನುತ್ತರವಾಗಿ
ನಗೆಮುಗುಳನರಳಿಸುತೆ ಅಹುದೆಂದು ಹೇಳಿದಂ.
“ದೇಹಬಂಧನದಲ್ಲಿ ಸೆರೆಸಿಲುಕಿದೀಆತ್ಮ
ಅಗ್ನಿಸಂಸ್ಕಾರದಿಂ ಕೊಳೆಸುಟ್ಟು ಕಳೆಯೇರಿ
ಮಿರುಗುವುದು ಕಾಳಿಕೆಯು ಕಳೆದುಳಿದ ಮಿಸುನಿಯಂತೆ.”

ಎಂದು ಹಯವೇರಿದಂ, ನಾನು ಹೌಹಾರಿದೆಂ.
ಮತ್ತೆ ನೋಡುವೆನೆಂದು ಆಶ್ವಾಸನಂಗೈದು
ಎವೆಮುಚ್ಚಿ ಬಿಡುವಲ್ಲಿ ಮಿಂಚಿನುರೆಯಾದಂ.
ಒಡನೆ ತಿರೆಗುರುಳಿದೆಂ, ಸಂಚಿತಪುಣ್ಯಕರ್ಮಂ
ಸಂದುದೆನೆ ಸ್ವರ್ಗದಿಂ ತಿರೆಗುರುಳ್ವ ಸುಮನಸೆಯು
ಪೋಲಂತೆ; ಥಳಥಳನೆ ಹೊಳೆದು ಹೊಗರುರಿದಂಥ
ಪುಣ್ಯದೀವಿಗೆಯಾರಿ ಉಳಿದ ಕಿಡಿ ಮಸಿಯಾಗಿ
ಕರಕಲಿಳಿಗುರುಳ್ವಂತೆ; ತುರಗಖುರಪುಟಹತಿಯು
ಧೂಳಿಯೊಳಗುರುಳಿದೆಂ ಬೆಚ್ಚಿಬೆಚ್ಚನೆ ಸುಯ್ಯು.

ಬಳಿಕಲೆಂತೋ ಮುಂದೆ ಮೂರ್ಛೆತಿಳಿದೆಚ್ಚರುತೆ
ನಾನೆ ನನ್ನಂ ಸಂತವಿಸಿ ಚಿಂತಿಸಿದೆನಿಂತು:
ಮದ್ರರಾಜನ ಮಗಳು, ಸತ್ಯವಾನನ ಮಡದಿ,
ಸಾವಿತ್ರಿ, ತನ್ನಾತ್ಮಸತ್ವದಿಂದಂತಕನ
ಮೆಚ್ಚಿಸಿ ವರಂಪಡೆದು, ಪ್ರಾಣೇಶನಾಯುವಂ

ಪಡೆವಂತೆ; ನಾನುಮೆನ್ನಾತ್ಮಸತ್ವೋನ್ನತಿಯ
ಪ್ರೇಮೆಯಿಂ ತಡೆಹರಿದನಂತತೆಯೊಳೊಂದಾಗಿ
ಅಣ್ಮನೊಡಗೂಡುವೆಂ ಎದೆಂಬ ಸಂಕಲ್ಪ
ಬುದ್ಧಿಯಿಂದೆಚ್ಚತ್ತು, ಶೋಕಹರ್ಷೋದ್ವಿಗ್ನ-
ಮನೆಯಾಗಿ; ಮರಳಿದೆ ಗೃಹಾಭಿಮುಖಗಮನೆಯಾಗಿ.

ಗತಿ ೨

ವಿದ್ರೋಹಿಗಳ ಘೋರಸಂಗ್ರಾಮಸಮಯದಲಿ
ಸಿಕ್ರಿಯಲಿ ನಾನಿದ್ದೆ. ಗ್ರೀಷ್ಮಋತುಸಮಯವದು.
ಭೂಗೋಳವಂ ಬಳಸಿ ಸೂರ್ಯದೇವಂ ತನ್ನ
ಪ್ರಖರಕಿರಣಂಗಳಿಂ ಸೃಷ್ಟಿಚೈತನ್ಯಮಂ
ಸುಡುವನೆನೆ ತೋರಿದಂ ಚಂಡಭೈರವನಂತೆ!
ಆತನುರಿಗಣ್ಣಂತೆ, ದಿಗ್ದಿಗಂತದೊಳಾಚೆ
ಕಾಳ್ಕಿಚ್ಚಿನುರಿ ಹೊತ್ತಿ ಗಿಡ ಮರಂಗಳನೆಲ್ಲ
ನಿರ್ನೆರಂ ದಹಿಸಿತ್ತು! ನಿರ್ಝರಣೆ ಬತ್ತಿತ್ತು,
ಧರಣಿ ನೀರಡಸಿತ್ತು. ಬೀಸಿ ಬಿಸಿಬಿಸಿಯಾಗಿ
ತಿರುಗಿ ಸುಟ್ಟುರಿಯಾಗಿ ಕೆಂಧೂಳಿಯಂ ಕವಿಸಿ
ವಿಲಯರುದ್ರಾವತಾರನ ನೃತ್ಯದಾರ್ಭಟದ-
ಪೋಲಂತೆ ಉನ್ಮತ್ತಮಾಗಿತ್ತು ಮಾರುತಂ!
ಅಗ್ನಿಯುಂ ಸೂರ್ಯನುಂ ಲಯಕಾರ್ಯಕರ್ತರೆನೆ
ತಮ್ಮ ತೇಜಃಪಿಂಡಮುರಿಯಿಂದೆ ಲೋಕಮಂ
ಸುಡುವಂದು ಪ್ರಾಣಿಸರ್ವಸ್ವಮುಂ ಬೆವಬೆವನೆ
ಬೆಂದು ಮೃಗತೃಷ್ಣಿಕೆಗೆ ಮರುಳಾಗುತಿತ್ತಂದು!
ನರರೂಪಿ ಮೃಗರೂಪಿ ಖಗರೂಪಿ ಕ್ರಿಮಿರೂಪಿ
ಅಣುರೇಣುತೃಣರೂಪಿ ತರುಗುಲ್ಮಲತೆರೂಪಿ
ಸರ್ವಚೈತನ್ಯಮುಂ ಸರ್ವಜೀವತ್ವಮುಂ
ಬಿಸಿಲ ಬವಣೆಗೆ ಬಳಲಿ ಮೂರ್ಛೆವೋದಂತಿತ್ತು!
ಸಿಕ್ರಿಯರಮನೆಯಲ್ಲಿ ರೋಸಿ ಬಿಸಿಲುರಿಸೆಕೆಗೆ,
ಆಸತ್ತು ಮಲಗಿರಲ್ ಕನಸಾದುದೆನಗೊಂದು:

ದೆಹಲಿಯರಮನೆಯಲ್ಲಿ ಪುರುಷಸಿಂಹಂ ಬಂದು
ಕತ್ತನೊಲಿದಾಡಿಸುತೆ, ಗಂಭೀರಗತಿಯಿಂದ-
ಲಡಿಯಿಡುತೆ ಮುಂಬರಿದು, ಗತಿಗೊಪ್ಪುವಂದದಲಿ
ಒಮ್ಮೊಮ್ಮೆ ಘರ್ಜಿಸುತೆ, ದೇಹಮಂ ತೂಗಿಸುತೆ,
ಲಾಂಗೂಲಮನೆತ್ತಿ. ಧ್ವಜದವೋಲಾಡಿಸುತೆ,
ಕೆಂಡದಂತುರಿವ ಕಣ್ಣಾಲಿಗಳ ತಿರುಗಿಸುತೆ,
ಕೇಸರಂಗಳ ಕೆದರಿ, ಮೈಕೊಡಹಿ ಮುಂಬರಿದು,
ಒಂದೆ ನೆಗೆತಂ ನೆಗೆದು, ಶತ್ರುಹನನಂಗೈದು,
ಮಾಯವಾಯಿತು ಸಿಂಹ! ದೂರ ಗಿರಿಗಹ್ವರ-
ದ್ವಾರದಿಂ ಮೊಳಗಿದುದು ಆರ್ಭಟಂ ಎದೆಬಿರಿಯುವಂತೆ!
ಒಡನೆ ಕಂಡದು ಕಣ್ಗೆ ಉರಿವ ಮರಳಿನ ಕಾಡು,
ಬಿಸಿಲ್ಗೆ ಬತ್ತಿದ ಕಡಲ್ ಮೈದೆಗೆದು ನಿಂದಂತೆ.
ಕಣ್ಗೆಸೆಯುವಾಸೀತ ಸೈಕತಸ್ತೋಮವಧಿ-
ರಾಜರಾಣಿಯರಂತೆ ಸಿಂಹಸಿಂಹಿಣಿ ಜೋಡಿ
ಕಣ್ಗೆಸೆದುದೆನಗಲ್ಲಿ ಶತ್ರುಹನನಂಗೈದ
ಸಿಂಹ ಸಿಂಹಿಣಿಯೊಂದ ಕೂಡಿತ್ತು ಬಂದಲ್ಲಿ.
ಸೈಕತಪ್ರಾಂಗಣದೊಳೆಲ್ಲಿಲ್ಲಿಯುಂ ನೋಡೆ
ನೆರಳಿಲ್ಲ, ನೀರಿಲ್ಲ, ಅದರೊಂದು ಕುರುಹಿಲ್ಲ.
ಕಣ್ಣಿಗೆತ್ತಲು ಮರಳು, ಕಿವಿಗೆ ಮರಳಿನ ಗಾಳಿ,
ದೂರ ಬಹುದೂರದಲಿ ಮುಸುಕು ತಳೆದಿಹ ಬಾನು,
ಕೆಳಗೆ ಒಂದೇ ಒಂದು ಅಂಜೂರ ಮರನಿಹುದು,
ಅದರ ತುದಿಯಾದರೂ ಮುಗಿಲ ಸಮಕೇರಿಹುದು,
ಅವುಗಳಿಗೆ ಕಣ್ಣೆದುರ ಜಗವೆ ಇಷ್ಟರೊಳಿತ್ತು.
ಆದರುಂ ಎನಿತೊಂದು ಶಾಂತಿಯಲಿ ಸುಖಿಸಿದುವು!
ಕಾಶ್ಮೀರದಲಿ ಬೆಟ್ಟ ಬೆಟ್ಟದಟ್ಟಿಗೆ ಕೂಡಿ
ಮಲಗುವವೊಲಾಸಿಂಹ ಸಿಂಹಿಣಿಯು ಕೂಡಿತ್ತು:
ಕನಸು ತಿಳಿದೆಚ್ಚೆತ್ತು ಕಣ್ತೆರೆದು ನೋಡಿದೆಂ.

ಭಾವಿಸಿದೆನಾರುದ್ರ ರಮಣೀಯ ಸ್ವಪ್ನಮಂ!
ಕನಸಿನರ್ಥವನರಿಯೆ ನಾವೆಷ್ಟರವರೆಂದು
ಮನದಳಲಸಾರಿಸಲು ಉದ್ಯಾನದೆಡೆಗಾಗಿ
ನಾನೊರ್ವಳೇ ನಡೆದೆ, ಕಾಹಿನವರನ್ನುಳಿದು.
ಎಲ್ಲಿ ಹೋಗುವುದೆನುವ ಗೊತ್ತುಗುರಿಯಿಲ್ಲದೆಯೆ
ತಿರುಗಿದೆನು ತೋಟದಲಿ ಮನಬಂದಕಡೆಗತ್ತ.
ನೆಲ ಕಾಯ್ದು ತಣಿದಿತ್ತು, ನೀರ್ಕುದಿದು ಆರಿತ್ತು.
ಗಿಡ ಸೊರಗಿ ನಿಂದಿತ್ತು, ಹೂ ಬಾಡಿ ಬಿದ್ದಿತ್ತು,
ಬಿಸಿಗಾಳಿಯುರಿಯಾರಿ ಭಾರವಾಗುತಲಿತ್ತು.
ದುಗುಡದಾಗರದಿಂದ ಶೋಕಸಾಗರದೆಡೆಗೆ
ಕ್ಷೀಣಾಂಗಿ ತೊರೆಯೊಂದು ತೆರೆ ಬತ್ತಿ ಹರಿದಿತ್ತು.
ಅದರೆಡೆಗೆ ನೊಗಬಾಗಿ ಬೊಗಸೆಯಿಂ ನೀರೆತ್ತಿ
ಹಣೆಯ ಬೆಮರ್ವನಿಗಳಂ ಅಳಿಸಿದೆಂ. ಕಣ್ಣುಮುಖ
ಕೈಕಾಲ್ಗಳಂ ತೊಳೆದು ದೇಹತಾಪಂ ಕಳೆದು
ಮೂಡಿದ ಮನಸ್ತಾಪಮಂ ತೊಳೆವುದಿನ್ನೆಂತೊ
ಎಂದು ಯೋಚಿಸುತೆ ಕೈ ಊರಿ ಕುಳಿತೆನಲ್ಲಿಯೆ
ಅದರ ಮರಳಂಚಿನಲಿ.
                    ಹೆಣ್ಣಾಗಿ ಹುಟ್ಟುವುದೆ
ತಪ್ಪೆಂದು ಹೋಯೆಂದು ಸುಯ್ದು ನಾಂ. ಮರಳು-
ಗಾಡಿನಲಿ ಹೊರೆಹೊತ್ತ ಸಂಕಟದೊಳೇದುತ್ತೇ-
ದುತೆ ಒಂಟೆ ನೀಳ್ಗೊರಲ ನೀಳ್ದನಿಯೊಳೊರಲ್ವಂತೆ!
ಪಸಿದೇಸಂಪೊಡನೆ ಎನ್ನಗೃಹಮೆಗೆ ನಾನೆ
ನಾಣ್ಚಿದೆಂ. ಮತ್ತೆ ಮರುಗಿದೆಂ, ಚಿಂತಿಸಿದೆನಿಂತು:
ಹೆಣ್ಣೊಲವಿನಮರತೆಯನುಪಭೋಗಿಸಲ್ ಬಂದು,
ಅವಳಾಸೆ ಕನಸುಗಳ ಗರಿಗಟ್ಟಿಸಲ್ ನಿಂದು,
ಬಳಿಕ ಕಣ್ಮರೆಯಾಗಿ, ಬೇಗುದಿಗೆ ಸಿಲುಕಿಸಿರೆ;
ಪುರುಷಜನ್ಮಿಯು ಕ್ಷಣಿಕ ಸುಖಸಾರದಾಹುತಿವ್ರೊ—

ಲಿವಳಿಲ್ಲಿ ಬೇಯುತ್ತಿರೆ ಹೆಣ್ಣಾಗಿ; ಆನೋವ-
ನಾರಿಸುವುದೆಂತೆಂದು ಬಲ್ಲನೆ ಪುರುಷಜನ್ಮಿ!
'ಬಲ್ಲನಹುದೆಂದು' ಬಲ್ಲುಲಿಯೊಂದು ಮೊಳಗಿದುದು!
ಭಯಚಕಿತೆಯಾಗಿ ಬೆವರುಣ್ಮೆ ನೆತ್ತರ್ ಕುದಿದು
ಹೌಹಾರಿದೆಂ, ಮರೆಯೊಳಾರಿರ್ಪರೋ ಎಂದು.
"ನಿರ್ಭೀರಂ ನೀನೇಕೆ ಬೆಚ್ಚುತಿಹೆ" ಎಂದೊಡನೆ
ನುಡಿಯುತಂ ದಿವ್ಯತೇಜೋಮೂರ್ತಿ ಪ್ರತ್ಯಕ್ಷ-
ಮಾದಂತೆ ಬಳಿಗೆ ಬಂದೆನ್ನ ರಕ್ಷಾಬಂಧಿ
ನಿಂತಂದು, ಹಿಂದೊಮ್ಮೆ ಕನಸುಕಂಡವಳಾನು
'ನಡೆದುದೇನಿದು ನಿಜಮೊ ಸ್ವಪ್ನಮೊ' ಎಂಬ
ಭ್ರಾಂತಿಯಾಳದೊಳದ್ದಿ ಮುಳುಗುತಿರೆ "ಜಹನಾರ,
ನಿನ್ನೊಡಲಿನುರಿಯಾರಿತೆ ಬಂದೆನಾಂ ರಣದಿಂದೆ"
ಎಂದಾತನಾಡಿದಂ. ಮುಖದ ತೆರೆಮರೆಯೆಳೆದು
ಇನಿಯನ ಮುಖಂ ನೋಡಿ ನಾಚುತರಘಳಿಗೆಯೊಳೆ
ಅವಗುಂಠನವನೆಳೆದು ಅಂತರ್ವದನೆಯಾಗಿ
ಆರ್ತಿಯಿಂ ವಿನಯಪೂರ್ವಕ ನಮಸ್ಕಾರದಿಂ
ಸ್ವಾಗತಿಸುತಿನಿಯನಂ ಕರೆತಂದೆನೆಲೆವನೆಯ
ಪುಳಿಲ್ದಾಣದೆಡೆಗೆಂದು.

ಆತ ವಿಶ್ರಮಿಸುತಿರೆ
ಪ್ರೀತಿಯಿಂದಾತಂಗೆ ನಾಂ ಕಂಡ ಸ್ವಪ್ನಮಂ
ಪೇಳುತೆ ಸವಿಸ್ತರಂ, ಆದರರ್ಥವೇನೆಂದು
ಬೆಸಗೊಂಡೆನಾತನಂ. ಸೊಂಟದಿಂದೊರೆಸಹಿತ
ಕಿತ್ತು ಕರವಾಳಮಂ ಒಡನೆ ಒರ್ತಡಿಗಿಟ್ಟು,
ಕುದಿಗೊಂಡು ಪೌರುಷೋನ್ಮಾದದಿಂದಾಡಿದಂ,
ನಿಂತ ನಿಲುವಂ ತಿದ್ದಿ ಕಣ್ಣಾಲಿಗಳ ಬೆಳಗಿ.
"ವಿಜಯ ಸೂಚಕಮಹುದು ನಿನ್ನ ಸುಂದರಕನಸು.
ಶತ್ರುಹನನೋತ್ಕರ್ಷದದ್ಭುತ ಪವಾಡಮಿದು

ಎನ್ನಿಂದೆ ನಡೆವುದೆಂಬಾದೇಶವಿಹುದಿಲ್ಲಿ;
ಈವರೆಗೆ ಕಾಳೆಗದೊಳೆಲ್ಲಿಯುಂ ಸೋಲಿಲ್ಲ
ಕೇಳೆಂದು; ಮೈಯುಬ್ಬಿ ಬಿತ್ತರಿಸಿ ಪೇಳಿದಂ
ನಡೆದೆರಡುಪಡೆಗಳಾ ರುದ್ರಸಂಗ್ರಾಮಮಂ.
ಆಕಥೆಯ ಕೇಳುತ್ತೆ ಹರ್ಷಪುಳಕಿತೆಯಾಗಿ
ನುಡಿದೆನಾನಿಂತೆಂದು: "ಕಾದುವರ ಪಡೆಯೊಡನೆ
ನಾನುಮಾರಣದಲ್ಲಿ ನಿನಗೆ ನೆರವೀಯುತ್ತೆ
ಶತ್ರುವನ್ನೆದುರಿಸಿರೆ, ಕ್ಷಾತ್ರವನ್ನುಕ್ಕಿಸಿರೆ,
ಆಗ ನಿನಗಿಮ್ಮಡಿಯ ಜಯವಾಗುತಿತ್ತಲ್ತೆ!
ಅಕ್ಬರನನೆದುರಿಸಿದ ಚಾಂದಬೀಬಿಯ ತೆರದಿ,
ನಮ್ಮ ಹಿರಿಹೆಸರಾದ ನೂರ್ಜಹಾನಳ ತೆರದಿ,
ನಾನುಮದ್ಭುತವಾಗಿ ರಣದಲ್ಲಿ ಕಾದುವೆಂ.
ನಿನಗಾಗಿ, ನಿನ್ನೊಡನೆ, ಜಯಸಿರಿಯ ಪಡೆಯುವೆಂ.
ಅಂತಃಪುರದೊಳಗಿರುವ ತೆರೆಮರೆಯ ಜೀವನಕೆ
ಬಲಿಯಾಗಲೊಲ್ಲದೆಯೆ, ಎನ್ನಮನವೆಳಸುತಿದೆ
ಇರ್ಬಾಯಖಡ್ಗಮಂ ತುಡುಕಿ ಘೋರಮುಖಕೋಡಿ
ಯೋಧನಿವಹದ ನಡುವೆ ಉಸಿರೆಳೆಯಬೇಕೆಂದು.
ಕೊಲೆಗೆ ಹೇಸುವೆನೆಂದು ಜೆವರುವೆಯ ವೀರವರ!"
"ಒದೇವಿ ರುದ್ರಾಂಬೆ! ಅರಿತೆ ನಿನ್ನಾತ್ಮಮಂ.
ಅರಿಯೆಯಾ ನೀನುಮೆನ್ನಾತ್ಮಮಂ? ನಿನ್ನನಿರೆ
ಎನ್ನಾತ್ಮ, ದನಿಯೆ ಜಯಭೇರಿ, ಒಲುಮೆಯೆ ಹರಕೆ.
ನೀನೆ ಬಾಳಿನ ಗಂಗೆ! ನೀನೆ ಪ್ರೇಮದ ತುಂಗೆ!
ಅವರಿವರ ಕಥೆಹೇಳಲವರಿಂದಲೇನು ಫಲ!
ತತ್ವವೇನಿದ್ದರೂ ಸತ್ವವೇ ಹಿರಿದಂತೆ.
ಆ ಆತ್ಮಸತ್ವದಿಂದೀಮಾತನಾಡುತಿಹೆ:
ಹೆಣ್ಣಿನೊಲುಮೆಯೆ ನಮಗೆ ಸರ್ವಪ್ರಾಣಾಧಾರ!
ಆ ಒಲುಮೆಯೇ ಜಗದಿ ಪರಮಶಾಶ್ವತ ಶಕ್ತಿ.

ಅದೆ ವಾಣಿಯಾವೇಶ, ಅದೆ ಗೌರಿಯಾಶ್ವಾಸ;
ಲಕ್ಷ್ಮೀಕಟಾಕ್ಷಮದೆ, ಅದೆ ಜಗದ್ಧಾತ್ರಿ ಕೃಪೆ,
ಪೇಣದುವೆ ತ್ರೈಲೋಕ್ಯಭೂಭುವನದಾನಂದ.
ಅದು ಜಗದ್ಭರಣ ಪೋಷಣ ಶಕ್ತಿ, ಅದುವೆ ಜಗ-
ದಾದಿಕಾರಣ ಶಕ್ತಿ, ಸೃಷ್ಟಿಪ್ರೇರಕ ಶಕ್ತಿ.
ಆಶಕ್ತಿಯಾಳದಂದು ವಿಶ್ವವೇ ಲಯವೆಂದು
ಹೇಳುವರನಾದಿಯಿಂದಾರ್ಯರುಮನಾತ್ಮರುಂ.
ಹೃದಯಪೀಠಗಳದೊಳಾರಾಧ್ಯಶಕ್ತಿಯದು
ಆ ಶಕ್ತಿಯಿಂದರಿತು ನಿನ್ನನಾಂ ಪೂಜಿಸುವೆ.
ಓ ದೇವಿ ಜಗಸಾರ! ನಿನ್ನ ಸಾನಿಧ್ಯವಿರೆ
ಚಿನ್ನವಾಗುವುದೆನ್ನ ಬಾಳುವೆಯ ಹುಡಿಮಣ್ಣು.
ಶಾಂತಿ ಸುಖಸಮೃದ್ಧಿಗಳೆನಗಿಲ್ಲಿ ದೊರೆಯುವುವು.
ಪ್ರೇಮಮೈತ್ರಿಗಳಂತೆ ಕಾರುಣ್ಯ ಸೌಹಾರ್ದ
ಲಭಿಸುವುವು ಈ ನಿನ್ನ ಸಾನ್ನಿಧ್ಯದಲಿ ನನಗೆ.
ಕಾಶಿರಾಮೇಶ್ವರಗಳೆನಗಿಲ್ಲಿ ಸಂಧಿಸಿವೆ.
ಇಹಪರಗಳಾಲಿಂಗನವೊಳಿಲ್ಲಿ ವಿರಮಿಸಿವೆ.
ನನಗಿದೆ ಪವಿತ್ರತಮ ಪ್ರೇಮಯಾತ್ರಾತೀರ್ಥ.
ಈ ತೀರ್ಥವಿಂಗಿದರೆ, ಈ ಗಂಗೆ ಬತ್ತಿದರೆ,
ನನಗೆನ್ನ ಯತ್ನದಲಿ ಜಯಸಿದ್ಧಿಯಾಗುವುದೆ?
ನಿನ್ನ ಪ್ರೇರಣೆಯೊಂದೆ, ನಿನ್ನೊಲುಮೆಕುರುಹೊಂದೆ,
ನನ್ನೊಡನೆ ಬರಲಿಂದು ರಣದೆಡೆಗೆ. ನೀನಿಲ್ಲಿ
ನಿಶ್ಚಿಂತೆಯಿಂ ನೆಲಸಿರೌ. ನಿನ್ನ ಗುರುತಾಗೆ,
ನಿನ್ನ ತುಟಿ ಮುದ್ದಿಡುವ ಮುಖದ ತೆರೆಯರಿವೆಯಲಿ
ಒಂದೆಳೆಯನೆಳೆದೆನ್ನ ಕೈಗೆ ಕಂಕಣಕಟ್ಟು,
ನಿನ್ನ ಅವಗುಂಠನದ ಸುಂದರ ಶ್ರೀಮಂತ
ವಸ್ತ್ರಾಂಚಲದ ಹರಿದ್ವರ್ಣಶೋಭೆಯೊಳೆಸೆವ
ಕಂಕಣಂ ನನ್ನ ತೋಳ್ ಸಿಂಗರಿಸಿ ಮೆರೆದಿರಲಿ;

ಯುದ್ಧಭೂಮಿಯೊಳೆನೆಗೆ ರಕ್ಷೆಯಾಗಿರುತಿರಲಿ.
ನಾನಿಂದು ನಿಜವಾಗಿ ನಿನ್ನ ರಕ್ಷಾಬಂಧಿ.
ಬೆನ್ನಿಗೆ ಗುರಾಣಿ, ಎದೆಗೆ ಕವಚಂ, ಕೈಗೆ ಅಸಿ,
ಶೀರ್ಷಿಕೆ ತಲೆಗೆ, ಕಂಕಣಂ ತೋಳ್ಗೆ, ಇವನುಳಿದು
ಬೇರೆ ಕಾಪಿನ್ನೇಕೆ? ಬೇರೆ ಕೈದುಗಳೇಕೆ? ೧೬
ಅವರಿಂದ ಓದೇವಿ! ಜಹಸಾರ ಬೇಗವುಳಿ!
ತಡಮಾಡದೆಯೆ ಕಟ್ಟು ಇದೊ ಕೈಗೆ ಕಂಕಣವ-
ನೆಂದು ಕೈನೀಡಿದಂ. ಆಜ್ಞಾವಿಧೇಯಳೆನೆ
ಮೂಕಹೃದಯಾವೇಶದುದ್ವೇಗಭರದಿಂದೆ,
ಕೈನೀಡುವನಿತರೊಳೆ, ವಸ್ತ್ರಾಂಚಲಂ ಹರಿದು. ೧೭
ಸಿಂಗರಿಸಿದೆಂ ಕಂಕಣವನವನ ಬಲಗೈಗೆ.
ನೀಲಿಮನಭೋಂಗಣದೊಳದೆ ಚುಕ್ಕಿ ಹೊಳೆದಿತ್ತು,
ಹೃದಯಾಂತರಾಳದೊಳಗಾಸೆಕಿಡಿ ಹೊಳೆವಂತೆ.
ಕೊಳದಕನ್ನೈದಿಲೆಗಳರಳಿ ನೀರ್ಗನ್ನಡಿಯೊ-
ಳೆಸೆದು ಮಿನುಗಿದುವಿಲ್ಲಿ ಆಸೆಯಾಮಿಷದಂತೆ. ೧೮
ಮೂಡಿದಂ ತಂಗದಿರನಾಡಿದುದು ತಂಗಾಳಿ,
ತುಂಬಿದುದು ತಂಪಿನ ಕಂಪಿನಿಂಪಿಳೆಯ ಮೇಲೆ.
ಹಕ್ಕಿ ಹಾರಿತು ಹಾಡಿ ವಿಜಯಪ್ರೇಮದಲೀಲೆ
ಸಿದ್ಧಿಸುವುದಹುದೆಂದು ಶುಭಶಕುನಮಂ ನುಡಿದು.
ಎದೆಗುದಿಯನಾರಿಸುತ ಬವರಜವಣೆಯು ಕಳೆದು
ನಾವೀರ್ವರುಂ ಅಂದು ಮರಳಿದೆವು ಅರಮನೆಗೆ.
ತಿರೆಯ ತೋಯಿಸಿ ನಿಂದ ಬೆಳದಿಂಗಳಂ ಪಿಂದು. ೧೯

ಗತಿ ೪

ದಿನನಾಥನಂ ಪೊತ್ತ ಅರುಣನ ರಥಂಬಂದು,
ಭೂಗೋಳಮಂ ಬಳಸಿ ಮೂವತ್ತು ಸೂಳ್ವರಂ
ತಿರುಗಿದುದು, ತಾಂ ನಿಷ್ಠೆಯಿಂ ಕಾಲಕಾಲಕ್ಕೆ.
ಎಣಿಸುತಿರ್ದೆಂ, ದಿನಂ ಮೂರುಪತ್ತಾದುದಂ
ಮೂರು ಯುಗಮಾದಂತೆ. ಮರುದಿನಂ ಬಂದಿನನ
ರಥದಂತೆ ಬಂದಿನಿಯನಂ ನೋಡಿ, ಉಷೆಯಂತೆ
ಹರ್ಷಪುಳಕಿತೆಯಾದೆ ಮೂಡಿದನುರಾಗದಿಂ.
ಯುದ್ಧಕಥೆಗಳ ಕೇಳಿ ಮತ್ತೆ ಮೈಯುಬ್ಬಿದೆಂ.
ಪ್ರೇಮಕಥೆಗಳ ಕೇಳುತಂತೆ ಮನವುಬ್ಬಿದೆಂ.
ಕ್ಷಣದಂತೆ ಕಳೆದತ್ತು ಎನಗಾದಿನಂ ಪಗಲ್.
ಬಾನಹೊಡೆಯಿಂದಿಳಿದು ಇನನಸ್ತಗಿರಿಯೇರಿ
ಹೊಂಗೈಗಳಂ ಮುಗಿದು ಪ್ರಾರ್ಥನೆಯ ಸಮಯಮಂ
ಸಾರುತಿಹನಿಳೆಗೆಂಬುದಂ ನೆನೆದು ನಾನುಮಂ-
ತಾತನುಂ ಮೌನದಿಂ ತಲೆವಾಗಿ ಪ್ರಾರ್ಥಿಸಿದೆ-
ವೀಶನಂ, ಧರ್ಮಮಂ ಬೆಳಗೆಮ್ಮೊಳನಿಶಮೆಂದು.
ಬಳಿಕ ರಕ್ಷಾಬಂಧಿ ಕುಳಿತೆನಗೆ ತತ್ವಮಂ
ಬೋಧಿಸುತೆ, ಇಹಪರದ ಶ್ರೇಯಮಂ ಪ್ರೇಯಮಂ
ಸಾಧಿಸುವ ರಸ ಋಷಿಯ ಮಾರ್ಗಮಂ ಪೇಳುತಿರೆ,
ಧ್ಯಾನದಿಂ ಕೇಳಿದೆನದಂ ತಪಸ್ವಿನಿಯಂತೆ.
ಪ್ರೇಮದಾರಾಧನೆಗೆ ಅಣಿಗೈವ ಭಕ್ತೆಯಂತೆ.
ಶುಕ್ರವಾರದ ಪೌರ್ಣಿಮಾ ರಜನಿ ಬಂದಂದು
ಇಳೆಯನಾಳುವ ದಿವಸ! ಚಂದ್ರಿಕೆಯ ಕಿರಣಗಳ

ಚುಂಬನೋತ್ಕರ್ಷದಿಂ ಯಮುನೆಯಾನಂದದಿಂ
ಉಕ್ಕೇರಿ ಹರಿವದಿನ! ಸುಮದಸೌರಭ ಹೊತ್ತ
ಗೌರವದ ಭಾರದಿಂ ಗಂಧವಾಹಂ ಬಂದು
ಮಂದಮಂದಂ ಬೀಸಿ ಕಂಪ್ರೂಡಿ ಸುಳಿವ ದಿನ!
ತಾಜಮಹಲಾದಿಸಂ ಗೌರಾಂಗಮುಂ ತಾಳ್ದು
ಅಮೃತಲೋಕದಿನಿಳಿವ ತಾಯಿಯಂ ಸ್ವಾಗತಿಸಿ
ನಲಿವ ದಿನ! ಅದರಿಂದಲಂದು ನಾವಿರ್ವರುಂ
ಸಾತ್ವಿಕಪ್ರೇಮದೌಪಾಸನೆಗೆ ತಾಯೆಡೆಗೆ
ತಾಜಮಹಲಿಗೆ ಎಂದು ತೆರಳಿದೆವು ಭಕ್ತಿಯಿಂದೆ.
ತಾಜಮಹಲೊಳಗಂದು ನೆರೆವ ಮೌಲ್ವಿಗಳಿರ್ವರು,
ಮಂತ್ರಪಾಠವನುಳಿದು, ನಮ್ಮನಿದಿರ್ಗೊಂಡೊಯ್ದು
ಕರೆತಂದರಮ್ಮನ ಸಮಾಧಿಯಿರುವೆಡೆಗಾಗಿ.
ಮುತ್ತುರತ್ನಗಳಿಂದ ಚಿತ್ರಕರ್ಮಂಗೈದ
ಬಣ್ಣಬಣ್ಣದ ಬಹಿರ್ವಾಸದಿಂ ಸಿಂಗರಿಸಿ,
ಸುಂದರ ಸಮಾಧಿಯಂ ಧೂಪದೀಪಂಗಳಿಂ
ಪುಷ್ಪಪತ್ರಂಗಳಿಂ ಫಲಗಳಿಂ ಪೂಜಿಸುತೆ,
ಸ್ವಸ್ತ್ಯಯನಮಂ ನುಡಿದು, ದಿವ್ಯಗೀತಂಗಳಂ
ಪಠಿಸಿ, ವಿಧ್ಯುಕ್ತ ಕರ್ಮಂಗಳಂಗೈದೆಮಗೆ
ಶುಭಮಕ್ಕೆಂದು ಆಶೀರ್ವದಿಸಿ ತೆರಳಿದರು.
ಬಳಿಕ ನಾವಿರ್ವರುಂ ಅಲ್ಲಿ ಮೊಳಕಾಲೂರಿ
ತಾಯ್ಗೆ ಬಿನ್ನಪಗೈದು ಸಲಿಸಿ ಸಂಪ್ರಾರ್ಥನೆಯ,
ಕೈಮುಗಿದು ನಿಂತಿರಲ್ ನುಡಿದೆ ನಾನಿಂತೆಂದು:
“ಎನ್ನ ಪ್ರೀತಿಯ ಚಿನ್ನ! ಎನ್ನ ಕನಸಿನ ರನ್ನ!
ನಿನ್ನ ಮನಸಿನೊಳಿರುವ, ನಿನ್ನೆದೆಗೆ ಪ್ರಿಯವಾದ,
ತಾಜಮಹಲಿಗೆ ಮಹಲೆ ಪಡಿನುಡಿಯ ಕೊಡುವಂಥ,
ಸಕ್ಕರೆಯ ಅಕ್ಕರೆಯ ನುಡಿಯೊಂದನಾಡುವೆಯು!
ತಾಯ ಸನ್ನಿಧಿಯಲ್ಲಿ ಪ್ರೇಮದಾಗರವಲ್ಲಿ

ಮೃದುಮಧುರಪ್ರೇಮಮಂತ್ರೋಪದೇಶವನಿತ್ತು
ನನ್ನೆದೆಯ ಸಂತವಿಪ ಪೀಯೂಷವೂಡುವೆಯ!”
ಕಣ್ಣು ನಾಲಗೆ ಮೂಗು ಚರ್ಮಂಗಳೆಲ್ಲವುಂ
ಕರ್ಣಂಗಳಾದುವೆನೆ ಕೇಳಲಾಶಿಸಿ ನಿಂದೆ.
ಪೇಳ್ವನಾವುದನೆಂದು, ಕೇಳ್ವೆನಾನೇನೆಂದು!
ಆತ ಬಾಯ್ತೆರೆಸು, ತುಟಿಯಲುಗಿ ದನಿ ಹೊಮ್ಮುವುದೆ
ತಡಂ; ಎದೆ ಕಿವಿಗೆ ಬಂದಂತೆ ಕಾತರದಿಂದೆ
ನಿಂದೆನಾಲಿಸುತೆ ಶಬ್ದೇಂದ್ರಿಯಂಗಳ ತೆರೆದು.
ಸೃಷ್ಟಿಕರ್ತನ ಮಹಿಮೆಯಂ ಕಂಡು, ಆ ದಿವ್ಯ
ಲೀಲಾವಿನೋದಂಗಳಂ ನೋಡಿ, ಮೈಯುಬ್ಬಿ
ಭಾವಪರವಶನಾಗಿ, ಬಳಿಯೆ ಪ್ರಾಂಜಲಿಬದ್ಧ-
ನೆನೆ ನಿಂದ ಶಿಷ್ಯಂಗೆ ಪ್ರೇಮದಿಂ ತತ್ತ್ವೋಪ-
ದೇಶವಂ ಮಾಡುವ ಮಹಾಜ್ಞಾನಿ ರಸಋಷಿಯ-
ವೋಲಂತೆ ದನಿಗೂಡಿಯಾಡಿದಂ ಇನಿಯನಿಂತು:
“ಓ ಎನ್ನಮನದನ್ನೆ! ಜಹನಾರಬೇಗಮಳೆ!
ಕೇಳು ನನ್ನೀನುಡಿಯನಿದು ಸನಾತನ ಸತ್ಯ.
ಪ್ರೇಮವೇ ಜಗದಲ್ಲಿ ಪರಮ ಶಾಶ್ವತ ತತ್ವ.
ಪ್ರೇಮಬಂಧಿತರಾವು ಅಜೆದಡದೊಳಗಿಂತೆ
ಪ್ರೇಮದಿಂ ಕೂಡುವೆವು. ಇದು ನಿಶ್ಚಯಂ ನಂಬು.
ನಾವಿಕರವೋಲಾವು ಆತ್ಮಶಕ್ತಿಯ ನೆಮ್ಮಿ,
ನಮ್ಮ ಸತ್ತ್ವೋನ್ನತಿಯೆ ನಮ್ಮ ಕಾವುದು ಎಂದು,
ನಮ್ಮ ಧರ್ಮೋನ್ನತಿಯೆ ನಮ್ಮನುಳುಹುವುದೆಂದು,
ಪ್ರೇಮರತ್ನಪ್ರಭೆಯ ಹೊಳೆವ ಮುಂಬೆಳಕಿನಲಿ
ಧೈರ್ಯಸಾಹಸಗಳಿಂ ಭವವನುತ್ತರಿಸುತಿರೆ;
ನಡುವೆ ಭಂಗಂ ಬಂದು ತೆರೆ ಮಸಗಿ ಹಡಗೊಡೆದು
ಕೂಡಿ ಹೊರಟವರಾವು ಅಗಲಿ ಬೇರಾದರುಂ
ಒಂದೆ ಗುರಿಯಾದುದರಿನಲ್ಲಿ ಎಂತಾದರುಂ

ಮತ್ತೆ ಸೇರಲೆಬೇಕು; ಯಾತ್ರೆ ಮುಗಿಯಲೆಬೇಕು.
ಎನ್ನ ಪಯಣಂ ಮುಗಿದು ನಾ ಮುಂದೆ ಹೋದಂದು
ಕಾಯುವೆಂ ನಿನಗಾಗಿ, ನನಗಿಂತ ಮುನ್ನಮೇ
ನೀನಲ್ಲಿಗೈದುವರೆ ಕಾಯುತಿರು ನನಗಾಗಿ.
ಇದೆ ಪ್ರೇಮ ಮಂತ್ರಂ ಪಠಿಸು ದೇವಿ! ಜಪಸಾರ!
ಕಾಯುವುದೆ ನಮ್ಮ ತಪ, ಸಂದರ್ಶನಮೆ ಸಿದ್ಧಿ".
ಮಾತು, ಅಲೆಅಲೆಯಾಗಿ ಒಡನೆ ಮಾರ್ದನಿಗೊಂಡು,
ಶತಶತಸಹಸ್ರ ಸುರನರ್ತಕಿಯರೊಗ್ಗೊರಲ
ಸಂಗೀತಮೇಳದೊಲು ಮೊಳಗಿದುದು ಸೌಧದಲಿ.
ದಿವ್ಯಪುರುಷಂಗೈದ ಪ್ರೇಮೋಪದೇಶದಿಂ
ಮಂತ್ರಮುಗ್ಧೋನ್ಮತ್ತ ನಾಗನವೊಲೆನ್ನ ಮನ
ಹೆಡೆಯರಳಿ ನಿಂದುದಾಮೋದದಿಂ ವಿವಶವಾಗಿ.
ಘಳಿಗೆಯಾವೇಶದಲಿ ಮರ್ತ್ಯದಿಂದಮರತೆಗೆ
ಆತ್ಮತೇಜೋಬಲದ ಗುಪ್ತಶಕ್ತಿಯಿನೇರಿ
ಅಮೃತರಸಭೋಗದಲಿ ಇಹಪರಂಗಳ ಮರೆತು
ನಿತ್ಯತೆಯ ತಬ್ಬಿದಂ ರಸಲಹರಿಯೊಳಗದ್ದಿ!

ತಾಜಮಹಲಂ ಬಿಟ್ಟು ಮನೆಗೆ ಮರಳುವ ವೇಳೆ
ಇನಿಯನಿಂತಾಡಿದಂ: "ನಾನು ಹೊರಡುವೆ ನಾಳೆ.
ಇಲ್ಲಿ ನಿನ್ನನು ತಿರುಗಿ ನೋಡಲೆನಗಾಗದಿರೆ
ಚಿಂತಿಸದಿರದಕಾಗಿ; ಮತ್ತೆ ನೋಡುವೆನಲ್ಲಿ."
ಮೌನದಿಂದಡಿಯಿಟ್ಟೆ ಸುಯ್ದು ನಿಟ್ಟುಸಿರಿಟ್ಟು.
ಇರುಳ ಹಕ್ಕಿಯದೊಂದು ಕಿರ್ರೆಂದು ಚೀರಿತ್ತು!
ಮೇಲೆ ಆಕಾಶದಲಿ ಮುಳುಗಲನುವಾಗಿದ್ದ
ಚಂದ್ರನಂ ಮುಸುಕಿ ಆವರಿಸಿತ್ತು ಮೋಡಸ್ತೋಮಂ!

ಗತಿ ೫

ನನ್ನ ಬಾಲ್ಯದ ಸಣ್ಣ ನೆನಪೊಂದು ಸುಳಿಯುತಿದೆ:
ನಾವು, ದಾರ ಮುರಾದ ಷೂಜ ಔರಂಗ್ಸೇಬ–
ರೆಲ್ಲರುಂ, ಎಳವೆಯಲಿ ಅರಮನೆಯ ತೊಟ್ಟಿಯಲಿ
ಆಟವಾಡಲು ನೆರೆದು, ಸಂಭ್ರಮದೊಳೊಂದಾಗಿ
ಮರದ ಕೀಲ್ಗೊಂಬೆಗಳ, ಕಾಲಾಳು ಸೈನಿಕರ,
ರಥ ತುರಗ ಹಸ್ತಿಗಳ, ಅವುಗಳಾರೋಹಕರ,
ಎದುರುಬದುರಾಗಿಟ್ಟು ಕೀಲ್ಗೊಟ್ಟು ತಿರುಗಿಸಿರೆ:
ಆನೆಯಾನೆಯ ಬಡಿದು, ಕುದುರೆ ಕುದುರೆಯ ತಾಗಿ,
ಆಳಿಗಾಳಿದುರಾಗಿ, ಹೊಯ್‌ಕೈಯೊಳೊಂದಾಗಿ
ಕಾದುವುದ ಕಂಡೊಡನೆ ಎನಿತು ಹಿಗ್ಗಿದೆವೆಂದು!
ಆಟದಲಿ ಕಂಡ ಯುದ್ಧವ ನೋಡಿ ನಲಿದಾನು
ನಿಜದ ಯುದ್ಧಕ್ಕಿಂದು ಬೇಸತ್ತು ಮರುಗುತಿಹೆ!
ನೋಣಂದಿನಾಟದಲಿ ನನ್ನಕಡೆ ಜಯವೆಂದು,
ನಿನ್ನಕಡೆ ಸೋಲೆಂದು, ಒಬ್ಬರೊಬ್ಬರ ಕುರಿತು
ಮೂದಲಿಸಿಯಾಡಿದೆವು. ಕಾಲ್ಮುರಿದು, ಕೈಮುರಿದು,
ಕೀಲ್ನಿಂತು, ಗೊಂಬೆ ಮುಂದೋಡದಿರೆ ಬೆದರಿದೆವು:
ಅಯ್ಯೊ ಸೋತೆವು ಎಂದು ಅಳುತಳುತಲೋಡಿದೆವು.
ಅಮ್ಮನಲಿ ಹೇಳಿದೆವು ನಮ್ಮಾಟದಪಜಯವ.
ಅಣ್ಣ ಕಿಡಿಸಿದನೆಂದು, ತಮ್ಮನಳಿಸಿದನೆಂದು
ಏನೇನನೋ ದೂರಿ ಅಳುತಿದ್ದ ಕಂದರನು
ತಾಯಿ ತೊಡೆಯೊಳಗಿಟ್ಟು 'ಕಂದರಿರ ಅಳಬೇಡಿ.
ನೀವು ಆಡುವ ಯುದ್ಧ ಮರದಗೊಂಬೆಯ ಯುದ್ಧ,

ಸೋಲಾದರೂ ಆಟ ಗೆಲುವಾದರೂ ಆಟ.
ಆಟವನು ಮರೆತಿಂತು ಅಳುತ ಬರುವುದೆ ಸಿಂವು'
ಎಂದೆಮ್ಮ ಸಂತಪಿಸಿ ಕಳುಹುತಿಪ್ಪಳು ತಾಯಿ.
ಅಂದು ಚಿಕ್ಕವರೆಂದು ಅಮ್ಮ ಹೇಳಿರಲಿಲ್ಲ.
ಇಂದು ದೊಡ್ಡವಳಾಗಿ ಅದನರಿತುಕೊಂಡಿಹೆನು.
ನಾವೆಲ್ಲ ದೇವದೇವನ ಕೈಯ ಗೊಂಬೆಗಳು.
ಅವಸಿಟ್ಟ ಗತಿಯಲ್ಲಿ, ಅವನೆಳೆದ ಗೆರೆಯಲ್ಲಿ,
ನಡೆಯುವೆವು, ನಿಲ್ಲುವೆವು, ಕಾದುವೆವು, ಹೋರುವೆವು.
ಕೆಳಗುರುಳಿ ಬೀಳುವೆವು, ಮೇಲೆದ್ದು ಆಳುವೆವು.
ಅವನ ಲೀಲೆಯೊಳಿಂತು ನಟವರ್ಗ ನಾವಾಗಿ
ನಾಟ್ಯದಭಿಲಾಷೆಯಲಿ ನೈಮನಂ ಮರೆತುಬಿಡೆ
ಸೋಲುಗೆಲುವುಗಳಿಲ್ಲ ಏಳುಬೀಳುಗಳಿಲ್ಲ.
ನಿರ್ಲಿಪ್ತಜೀವನದ ಪರಮಸುಖಧಾಮದಲಿ
ನಿಸ್ವಾರ್ಥಜೀವನದ ಲೀಲಾವಿನೋದದಲಿ
ಪೂರ್ಣನಾಗುವನಾತ್ಮ ರಸಮಯಂ ತಾನಾಗಿ!

ತಂದೆ ಮಡಿದಿಹನೆಂದು ಸುದ್ದಿ ಬಂದಿತು ನನಗೆ.
ಸಂತಸದ ಸುದ್ದಿಯಿದು! ತನಗಾಗಿ ಕಾದಿದ್ದ
ಪ್ರೇಯಸಿಯ ಬಳಿಗೈದಿ ಕಾಂತಾಸವನಾಗಮದಿ
ಆತ ಸುಖಿಸುವನಲ್ಲಿ. ಅವನ ದೇಹವನಿಲ್ಲಿ
ಒಪ್ಪವಾಡಿಟ್ಟಿಹರು ಆ ಶ್ವೇತಸೌಧದಲಿ.
ಷಾಜಹಾನಾ ಸೆಲೀಮರಿಗೆಂದು ದಿನದಿನಂ
ದೀಪಹಚ್ಚುವರಿಲ್ಲಿ ಧೂಪ ಉರಿಸುವರಿಲ್ಲಿ
ಚಂದ್ರನುಂ ಸೂರ್ಯನುಂ ಹೊಳೆದು ಬೆಳಗುವರಿಲ್ಲಿ.

ದಾರನುಮನಾಯೆಡೆಯು ಹೂಳಿರುವರಾಳದಲಿ.
ಮೇಣಂತೆ ಮಡಿದೆಲ್ಲ ಬಂಧುಭಗಿನಿಯರಲ್ಲಿ
ಪವಡಿಸಿಹರಾತ್ಮಸುಖನಿದ್ರೆಯ ನಿರಾಳದಲಿ.
ನನ್ನೊಡಲ ಕಟ್ಟಾಣಿ, ನನ್ನೊಲುಮೆ ಕಣ್ಣಮಣಿ,

ಭಾರತೀಯರ ಬಂಧು, ನನ್ನ ರಕ್ಷಾಬಂಧಿ
ಜನ್ಮಭೂಮಿಗೆ ತನ್ನ ರಕ್ತತರ್ಪಣಮಿತ್ತು,
ಇಂದ್ರಲೋಕಂ ಸಾರ್ದು ಕಂಕಣವಿಸರ್ಜನೆಗೆ
ಕೈನೀಡಿ ಕಾದಿಹಂ ನನಗಾಗಿ!

ನಾನುಮಾ

ಕಾಲನ ನಿರೀಕ್ಷೆಯಲಿ ದಿನವೆಣಿಸುತಿಹೆನಿಲ್ಲಿ,
ಏಕಾಂಗಿಯಾಗ ಸಂಗಡಿಗರಾರಿಲ್ಲವೆನೆ.
ಕಳೆದ ಕಾಲದ ಕಥೆಯನಿನ್ನೇಕೆ ಹೆಣೆಯುವುದು!
ಹಳೆಯ ಹಾಡಿನ ನುಡಿಯನಿನ್ನೇಕೆ ನುಡಿಸುವುದು!
ಎಲ್ಲ ವ್ಯಥೆಗಳ ಕಥೆಯ ಮಿಡಿದಿನ್ನು ಫಲವೇನು!
ನೆನಪಿಗವು ಬರದಿರಲಿ ಮರವಿನೊಳಗಡಗಿರಲಿ,
ವಿಸ್ಮೃತಿಯ ಕಡಲಾಳದೊಳಗೆಲ್ಲ ಮುಳುಗಿರಲಿ.
ಉಂಡ ಬಳಿಕಿನ್ನೆಮಗೆ ಏಕೆ ದೀಪದ ಚಿಂತೆ
ಆರಿರುವುದಾರಿರಲಿ ಮತ್ತೆ ಹೊತ್ತಿಸದಿರಲಿ.
ತೈಲವಿಂಗಿದ ಮೇಲೆ ಆರುವುವು ಕೆಲದೀಪ.
ಬತ್ತಿಕಳಚಿದ ಮೇಲೆ ಆರುವುವು ಹಲಕೆಲವು.
ಹಣತೆಯೊಡೆದೆಣ್ಣೆಸುರಿದಾರುವುವು ಹಲಕೆಲವು.
ಇನ್ನು ಕೆಲವಾರುವುವು ಬಿರುಗಾಳಿ ಬೀಸಿದರೆ.
ಮತ್ತೆಕೆಲದೀಪಗಳು ಚಿಟ್ಟೆಗಾಹುತಿಯಾಗಿ
ನಂದುವುವು: ಬಣ್ಣಬಣ್ಣದ ಚಿಟ್ಟೆ ದೀಪವನೆ
ಹಣ್ಣೆಂದು ಬಳಿಸಾರಿ ಕುಣಿದಾಡಿ ಮುದ್ದಾಡಿ
ಮೈಸುಟ್ಟು ಮನಸುಟ್ಟು ಸುಡುವದೀಪಕೆ ಬಿದ್ದು
ಸಾಯುವುದು; ದೀಪವೂ ನಂದುವುದು. ಇದಕಾಗಿ
ಮರುಗುವುದು ನನ್ನನ್ನರೊಲವಲ್ಲ ತರವಲ್ಲ.

ಮಧುಮಾಸಮುದಯದಲಿ ರಜಪೂತರಾಣಿಯರು,
ಊರಹತ್ತಿರ ಹರಿವ ಹೊಳೆಯ ಬಳಿಯೊಳು ಸೇರಿ,
ದೀಪೋತ್ಸವಂ ನಡೆಸಿ, ಮಧುಪೂಜೆಯಂ ಮಾಡಿ,

ಎಲೆಯ ದೊನ್ನೆಗಳೊಳಗೆ ಉರಿವ ಸೊಡರನ್ನಿಟ್ಟು,
ತೇಲಿಬಿಡುವರು ಹರಿವ ಹೊಳೆಯ ನೀರಿನ ಮೇಲೆ.
ಗಾಳಿ ನೂಕಿದ ಕಡೆಗೆ, ನೀರು ಹರಿಯುವ ಕಡೆಗೆ,
ಅಲೆಯೆದ್ದು ಬಿದ್ದಂತೆ ಕುಣಿಕುಣಿದು ಮುಂದೋಡಿ,
ತೇಲುವುದು ಹಣತೆ; ಉರಿಯುವುದು ದೀಪ; ಹಿರಿಹಿರಿ
ಹಿಗ್ಗುತಾನಂದದಿಂ ರಜಪೂತರಾಣಿಯರು
ಮರಳುವರು ನಲಿದಾಡಿ ಹಬ್ಬದೊಸಗೆಯ ಹಾಡಿ.
ಕಾಲಿಸಾಹಿನಿಯಲ್ಲಿ ನಾನಿಂದು ಅವರಂತೆ
ದೀಪೋತ್ಸವಂಗೈದು ನಾದದೀಸೊಡರನ್ನು
ನನ್ನಾತ್ಮದೀ ದೀಪದಾರತಿಯನಿದನಿಂದು
ತೇಲಿಬಿಡುವೆನು ಮುಂದೆ ನನ್ನರಕ್ಷಾಬಂಧಿ-
ಯಾತ್ಮಸಂಪರ್ಶನಕೆ ನಲಿಯುತಿದು ಸಾಗಲೆಂದು.

ಮಣ್ಣಡಿಯ ದೇಹವಂ ಮುತ್ತುರತ್ನದಿ ಹೊದಿಸಿ
ಸುಂದರಸ್ತೂಪವಂ ಸಿಂಗರಿಸಿ ನಿಲ್ಲಿಸುವ
ಪ್ರೀತಿಯಾರಾಧನೆಯ ತತ್ವವಂ ಅರಿಯದೆಯೆ,
ಲೋಭರತರಾದ ಜನ, ಸ್ತೂಪವಂ ಪಾಳ್ಗೈದು
ಸೂರೆಗೊಳ್ಳುವರದರ ಮುತ್ತುರತ್ನಂಗಳಂ.
ಆದುದರಿನೆನಗಂಥ ವೈಭವಂಗಳ್ ಬೇಡ
ಹಸುರು ಹುಲ್ಲಿನ ಹೊದಿಕೆ ನನಗೆ ಮರೆಯಾಗಿರಲಿ.
ಲೋಭದಿಂದಲ್ಲದಿರೆ ದ್ವೇಷದಿಂದಾವರುಂ
ಯಾರೆನಿತು ಸಾಹಸದಿನದನೆಳೆದು ಕಿತ್ತರುಂ,
ಮೊದಲಿಗಿಮ್ಮಡಿಯಾಗಿ ಬೆಳೆದು ಹಚ್ಚಗೆ ಕೂಡಿ,
ಮುಚ್ಚುವುದು ಗೋರಿಯಂ ಸುಮನಸರ ಶಾಂತಿಯಿಂ,

ಷಾಜಹಾನ, ಸೆಲೀಮು, ದಾರ, ರಕ್ಷಾಬಂಧಿ
ನಾಲ್ವರೆ ವಲಂ; ನನಗೆ ಈಯೊಂದು ಅರಿವಿತ್ತು
ನನ್ನನಾನರಿವಂತೆ ನನ್ನಾತ್ಮವಂ ಬೆಳಗಿ
ಅವಿನಾಶಿ ಚೈತನ್ಯ ತತ್ವಮದನೆಂದರುಹಿ

ಅದೆ ಸತ್ಯಮಾನಂದ, ಅದೆ ಶಿವಂ ಅದ್ವೈತ,
ಅದೆ ಹೃದ್ಯಸುಂದರಂ, ಅದೆ ಜಗದ್ವ್ಯಾಪಿ ರಸ-
ಮದೆಪೂರ್ಣಮದೆ ಭೂಮಮದೆ ಬೃಹತ್ ಎಂಬುದಂ
ಪೇಳ್ದಂತೆ ಅದನರಿವ ಪೂಣ್ಕೆಯಂ, ಆ ದಿವ್ಯ
ಕಾಣ್ಕೆಯಂ, ಎನಗಿತ್ತು ಸಂದರವರೆಲ್ಲರುಂ.
ನಾನಿಂದು ಸೃಷ್ಟಿಯಲಿ ಏಕಾಂಗಿಯಾಗಿರುವೆ.
ಲೋಕಾಂತದೆಡೆಸೇರಲೇಕಾಂತಕೆಳಸುತಿಹೆ.
ಆದರಿಂದಲೆನ್ನಾತ್ಮ ಕಥೆಯ ಮುಗಿಸುವ ಮುನ್ನ
ಮಂಗಳದ ಶ್ಲೋಕಮೊಂದೀನುಡಿಯ ಹಾಡುವೆಂ:
'ತನ್ನರಿವೆ ತನಗೆ ಗುರು ತನಗೆ ತಾನೇ ರಕ್ಷೆ.
ತನ್ನ ಮರೆವುದೆ ಬಂಧ ತನ್ನನರಿವುದೆ ಮೋಕ್ಷ.
ತನ್ನಾತ್ಮಬಲದಿಂದೆ ತನ್ನ ಇಹಪರಸೌಖ್ಯ.
ತಾನೆ ಸಾಧಿಸಬೇಕು ತನ್ನಮರಪದವಿಯಂ.
ತಾನೆ ಭೋಗಿಸಬೇಕು ತನ್ನಮೃತದನ್ನಮಂ.'
ಇಂತು ಮಂಗಳ ಹಾಡಿ ಮೊಗಲರಾಜಕುಮಾರಿ
ಮೌನದಿಂ ಧ್ಯಾನಿಸುತೆ, ಆತ್ಮನಂ ಸಾಧಿಸುತೆ,
ಶುಭ್ರತೇಜೋಮೂರ್ತಿ ಬೆಳಗಿದಳನಂತಮಂ
ಧವಳ ದೀಧಿತಿಯಾಗಿ; ಗಂಗೆಯಂ ಬಿಟ್ಟೈದಿ
ಮಾನಸ ಸರೋವರದೊಳೆಸೆಯುವರಸಂಚೆಯಂತೆ.

'ರಾಗಿಣಿ'

ಕೆಲವು ಅಭಿಪ್ರಾಯಗಳು

Ragini is a collection, the author's first, of some thirty pieces and reflects the delight of a young mind in the world of sensuous beauty stretching all about him. Bird flower, wind, water, love and moonlight charm him; and some fine moments and pictures are captured in song and verse. . . . . . . 'One Night', 'O Light the Lamp', 'The Ranja Flower' 'The Devaraya Durga', 'The Parrots of Vijayanagar' and 'Kajana' (the singing wood-bird) are fine pieces.

—HINDU

ಭಾವ-ಅನುಭವಗಳ ಅನುಭಾವದಿಂದುಂಟಾದ ರಸದೊರತೆಯು ಬುಗ್ಗೆ ರಾಗಿಣಿ. ಕವಿಯ ಅನುಭವ ಭಾವದಲ್ಲಿ ವ್ಯಕ್ತವಾದಾಗ "ಬಳ್ಳಿಯಿಂದ ಹೂವು ಹೊಮ್ಮುವಂತೆ" ಹೊರಬಿದ್ದ ಕವನಗಳು ಕೆಲವು, ಕವಿಯು ಕೇವಲ ಭಾವೋನ್ಮಾದದ ಪರವಶತೆಯಲ್ಲಿ ಸಿಕ್ಕಿಬಿದ್ದಾಗ 'ಮುಗಿಲಿನಿಂದ ಮಿಂಚು ಹೊಮ್ಮುವಂತೆ' ಮಿಂಚಿದ ಕವನಗಳು ಕೆಲವು, ಅನುಭವದ ರಸಪಾಕವು 'ವೀಣೆಯಿಂದ ವಾಣಿ ಹೊಮ್ಮುವಂತೆ' ದನಿಗೆಯ್ವ ಕವನಗಳು ಕೆಲವು. ಇವೆಲ್ಲ 'ರಾಗಿಣಿ'ಯ ರಸದೊರತೆಗಳು.

—ಪ್ರಬುದ್ಧ ಕರ್ಣಾಟಕ

ಲೇಖಕರು ತಮ್ಮ ಕವನಗಳಿಗೆ ಬಳಕೆಯಲ್ಲಿರುವ ಸನ್ನಿವೇಶಗಳನ್ನೇ ಕಾವ್ಯವಸ್ತುವಾಗಿ ಪರಿಗ್ರಹಿಸಿರುವುದರಿಂದಲೂ ಮತ್ತು ರೂಢಿಯಲ್ಲಿರುವ ಪದಗಳನ್ನೇ ಉಪಯೋಗಿಸಿರುವುದರಿಂದಲೂ ಪದ್ಯಗಳು ಬಹಳ ಸುಲಭವಾಗಿ ಮಂದಟ್ಟಾಗುವಂತೆ ಇವೆ. ಕೇವಲ ಸಾಮಾನ್ಯವಾದ ಮತ್ತು ಸಹಜವಾಗಿ ನಮ್ಮ ಲಕ್ಷ್ಯಕ್ಕೇ ಬಾರದ ವಸ್ತುಗಳೇ, ಕವಿಯ ಪ್ರತಿಭೆಯಿಂದಲೂ ಕವಿತಾಶಕ್ತಿಯಿಂದಲೂ ಹೇಗೆ 'ರಸ'ವುಳ್ಳ ವಸ್ತುಗಳಾಗಿ ಮಾರ್ಪಾಡಾಗುವುವು ಎಂಬುದಕ್ಕೆ "ರಾಗಿಣಿ"ಯಲ್ಲಿನ ಕವನಗಳೇ ಉದಾಹರಣೆ. . . . . . ಲೇಖಕರು ತಮ್ಮ ಪ್ರಸ್ತಾವನೆಯಲ್ಲಿ ಭಾವಗೀತೆ ಎಂದರೇನು, ಅದರ ರಚನೆ ಮತ್ತು ನಿರೂಪಣೆ ಹೇಗೆ, ಮುಂತಾದ ಭಾವಗೀತೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಬಹಳ ಸಾರವತ್ತಾಗಿ ವಿವರಿಸಿರುತ್ತಾರೆ.

—ಕತೆಗಾರ

'ರಾಗಿಣಿ'

ಕೆಲವು ಅಭಿಪ್ರಾಯಗಳು

ಶ್ರೀಮರ್ಾ ಪರಮೇಶ್ವರಭಟ್ಟರ ಈ ಸುಮಾರು ಇಪ್ಪತ್ತೈದು ಮೂ-ವತ್ತು ಸಣ್ಣ ದೊಡ್ಡ ಗೀತಿಕಾ ಗುಚ್ಛಗಳಲ್ಲಿ ಒಂದೊಂದೂ ಮನೋ-ಲ್ಲಾದಕವಾಗಿದೆ. —ಸುಬೋಧ

ಇವರ ಒಳ್ಳೆಯ ಭಾವಗೀತಗಳಲ್ಲಿ ಕಾಣುತ್ತಿರುವ ಅನ್ಯೋಕ್ತಿ-ರೂಪಕಗಳ ವಿಲಾಸವು ಔಚಿತ್ಯಪೂರ್ಣವಾದುದಾಗಿದೆ. ಶಬ್ದದ ನಾದ-ನೃತ್ಯಗಳೂ ಸೊಗಸಾಗಿವೆ. ನಿಡುಗವಿತೆಗಳಾದ 'ದೇವರಾಯನದುರ್ಗ' 'ವಿಜಯನಗರದ ಗಿಣಿ' ಎಂಬುವುಗಳಲ್ಲಿ ದೇಶಾಭಿಮಾನ ಮೂಲಕ-ವಾದ ಉತ್ಸಾಹ-ಕರುಣೆಗಳು ಮೊಗದೋರುತ್ತಲಿದ್ದರೆ 'ಕಾಜಾಣ' ಎಂಬುದರಲ್ಲಿ ಮಲೆನಾಡಿನ ಸೌಂದರ್ಯದರ್ಶನದ ಉತ್ಕಟತೆ ತಲೆ-ಯಿಕ್ಕುತ್ತಿದೆ. 'ಮಾಚಯ್ಯ'ನ ಕತೆಯನ್ನು ಹೇಳುವ ಸರಳರಗಳೆಯ ಭಾಷೆ ಸೊಗಸಾಗಿದೆ. —ಜಯಂತಿ

ಪುಸ್ತಕದ ಕವಿತೆಗಳ ಸಂಗ್ರಹವು ಬೇಜಾರು ಹುಟ್ಟಿಸುವಂತೆ ಒಂದೇ ಜಾತಿಯುದಾಗಿಲ್ಲ. . . . . . ಕವಿಸಮಯಗಳೂ, ಭಾವಾನುಭವದ ಸಂದರ್ಭಗಳೂ ಹೃದಯಂಗಮವಾಗಿವೆ. —ವಿಶ್ವಕರ್ಣಾಟಕ

ಶ್ರೀ ಪಾಂಡುರಂಗ ಪ್ರೆಸ್
ತುಮಕೂರು